ಸಂಪುಟ 01 | ಸಂಚಿಕೆ 155 | ಸೋಮವಾರ 27 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ವಿನ್ಯಾಸ ದಿನ**

ರೂಪ, ಸೌಂದರ್ಯಶಾಸ್ತ್ರ ಮತ್ತು ಕ್ರಿಯಾತ್ಮಕತೆ ಸೇರಿದಂತೆ ವಿನ್ಯಾಸದ ಎಲ್ಲಾ ಅಂಶಗಳನ್ನು ಈ ದಿನವು ಗೌರವಿಸುತ್ತದೆ. ಹೆಚ್ಚುವರಿಯಾಗಿ, ಇದು ಜಾಗತಿಕ ಮಟ್ಟದಲ್ಲಿ ದೃಶ್ಯ ಸಂವಹನ, ಗ್ರಾಫಿಕ್ ವಿನ್ಯಾಸ, ಅರಿವು, ಪ್ರಚಾರ, ನಿರ್ವಹಣೆ ಮತ್ತು ತರಬೇತಿಯನ್ನು ಮುನ್ನಡೆಸುತ್ತದೆ. ವಿನ್ಯಾಸದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ಹೆಚ್ಚಿಸುವುದು ವಿಶ್ವ ವಿನ್ಯಾಸ ದಿನದ ಉದ್ದೇಶವಾಗಿದೆ.

**2) ವಿಶ್ವ ಟ್ಯಾಪಿರ್ ದಿನ**

ತೀವ್ರವಾಗಿ ಅಳಿವಿನಂಚಿನಲ್ಲಿರುವ ಈ ಟ್ಯಾಪಿರ್ ಪ್ರಭೇದಗಳ ಬಗ್ಗೆ ಗಮನ ಸೆಳೆಯಲು ಮತ್ತು ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಗೆ ರಕ್ಷಣೆಯನ್ನು ಉತ್ತೇಜಿಸಲು ಪ್ರತಿ ವರ್ಷ ಏಪ್ರಿಲ್ 27 ರಂದು ವಿಶ್ವ ಟ್ಯಾಪಿರ್ ದಿನವನ್ನು ಆಚರಿಸಲಾಗುತ್ತದೆ. ಈ ಜನಪ್ರಿಯವಲ್ಲದ ಪ್ರಾಣಿಗಳ ಬಗ್ಗೆ ಜ್ಞಾನವನ್ನು ಹರಡುವುದು ಮತ್ತು ಈ ಅಳಿವಿನಂಚಿನಲ್ಲಿರುವ ಪ್ರಭೇದಗಳ ಅಳಿವನ್ನು ತಡೆಯುವುದು ಈ ದಿನದ ಉದ್ದೇಶವಾಗಿದೆ

## ಸುಭಾಷಿತ

ಸದ್ವರ್ತನೆ ಮತ್ತು ವಿನಯದ ಮಾತುಗಳು ಎಂಥ-
'ದೇ ಕಠಿಣ ಪರಿಸ್ಥಿತಿಯಲ್ಲೂ ನಮ್ಮನ್ನು ಪಾರು
ಮಾಡಬಲ್ಲವು.

-ಸರ್ ಜಾನ್ ವಾಂಬರ್ಗ್

# ಇರಾನ್‌ನಿಂದ ಅಮೆರಿಕಕ್ಕೆ ಹೊಸ ಶಾಂತಿ ಒಪ್ಪಂದ : ಮೂರು 3 ಮುಖ್ಯ ಅಂಶಗಳ ಉಲ್ಲೇಖ

**ನೈಜ್ಯ ದೇಸೆ ನ್ಯೂಸ್**



ಟೆಹ್ರಾನ್/ವಾಷಿಂಗ್ಟನ್, ತೀವ್ರಗೊಂಡಿರುವ ಅಮೆರಿಕ-ಇರಾನ್ ಸಂಘರ್ಷದ ನಡುವೆ. ಇರಾನ್ ಅಮೆರಿಕಾಗೆ ಹೊಸ ಶಾಂತಿ ಒಪ್ಪಂದದ ಪ್ರಸ್ತಾವನೆ ನೀಡಿದೆ ಎಂಬ ಮಾಹಿತಿ ಹೊರಬಿದ್ದಿದೆ. ಪಾಕಿಸ್ತಾನದ ಮಧ್ಯಸ್ಥಿಕೆಯಿಂದ ಈ ಪ್ರಸ್ತಾವನೆ ಅಮೆರಿಕಾಗೆ ತಲುಪಿದೆಯೆಂದು ವರದಿಗಳು ತಿಳಿಸಿವೆ. ಆದರೆ ಈ ಒಪ್ಪಂದವನ್ನು ಅಮೆರಿಕ ಪರಿಗಣಿಸುವುದೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಪ್ರಸ್ತಾವನೆಯ ಮೂರು ಪ್ರಮುಖ ಅಂಶಗಳು ಇರಾನ್ ನೀಡಿರುವ ಹೊಸ ಒಪ್ಪಂದವು ಮುಖ್ಯವಾಗಿ ಈ ಮೂರು ವಿಷಯಗಳ ಮೇಲೆ ಕೇಂದ್ರೀಕೃತವಾಗಿದೆ ಹೋರ್ಮುಜ್ ಸಮುದ್ರಸಂಧಿ ಪುನಃ ತೆರೆಯುವುದು ಜಾಗತಿಕ ಇಂಧನ ಸರಬರಾಜಿನಲ್ಲಿ ಮಹತ್ವದ್ದಾದ ಹೋರ್ಮುಜ್ ಸಮುದ್ರಸಂಧಿಮುಚ್ಚಲ್ಪಟ್ಟಿರುವುದರಿಂದ ಉಂಟಾದ ಇಂಧನ ಸಂಕಷ್ಟವನ್ನು ನಿವಾರಿಸಲು ಇದನ್ನು ತಕ್ಷಣ ತೆರೆಯಲು ಒತ್ತಾಯಿಸಲಾಗಿದೆ. ಯುದ್ಧಕ್ಕೆ ಅಂತ್ಯ ಮತ್ತು ಯುದ್ಧ ವಿರಾಮ ವಿಸ್ತರಣೆ ಈಗಿರುವ ತಾತ್ಕಾಲಿಕ ಯುದ್ಧ ವಿರಾಮವನ್ನು ದೀರ್ಘಾವಧಿಗೆ ವಿಸ್ತ-ರಿಸುವುದು ಅಥವಾ ಶಾಶ್ವತ ಶಾಂತಿ ಒಪ್ಪಂದಕ್ಕೆ ಬರುವುದನ್ನು ಇರಾನ್ ಸೂಚಿಸಿದೆ. ಅಣು ಕಾರ್ಯಕ್ರಮದ ಮಾತುಕತೆ ಮುಂದೂಡುವುದು ಇರಾನ್‌ನ ಅಣು ಕಾರ್ಯಕ್ರಮದ ಕು-ರಿತು ಮಾತುಕತೆಗಳನ್ನು ತಕ್ಷಣ ನಡೆಸದೇ,ಮೊದಲಿಗೆ ಸಮುದ್ರಸಂಧಿ ತೆರೆಯುವ ಹಾಗೂ ಅಮೆರಿಕಾ ನೌಕಾನಿರ್ಬಂಧವನ್ನು ತೆಗೆದುಹಾಕಿದ ನಂತರ ಮುಂದಿನ ಹಂತದಲ್ಲಿ ಚರ್ಚಿಸಲು ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾವನೆ ವೈಟ್ ಹೌಸ್‌ಗೆ ತಲುಪಿರುವುದಾಗಿ ವರದಿಯಾಗಿದೆ.ಆದರೆ ಅಮೆರಿಕ ಈ ಒಪ್ಪಂದವನ್ನು ಸ್ವೀಕರಿಸುವುದೇ ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ. ಶ್ವೇತಭವನ ವಕ್ತಾರ ಒಲಿವಿಯಾ ವೇಲ್ಸ್ ಪ್ರತಿಕ್ರಿಯಿಸಿ, "ಈ ರೀತಿಯ ಸೂಕ್ಷ್ಮರಾಜ-ತಾಂತ್ರಿಕ ವಿಷಯಗಳನ್ನು ಮಾಧ್ಯಮಗಳಮೂಲ ಕಚರ್ಚಿಸುವುದಿಲ್ಲ" ಎಂದು ತಿಳಿಸಿದ್ದಾರೆ.ಅವರು ಇನ್ನಷ್ಟು ಹೇಳಿದ್ದು. "ಅಮೆರಿಕಾದಹಿತಾಸಕ್ತಿಗೆ ಅನುಗುಣವಾದ ಒಪ್ಪಂದವನ್ನೇ ನಾವು ಒಪ್ಪುತ್ತೇವೆ. ಇರಾನ್‌ಗೆ ಅಣ್ವಸ್ತ್ರ ಹೊಂದಲು ಅವಕಾಶ ನೀಡುವುದಿಲ್ಲ" ಎಂದಿದ್ದಾರೆ. ಇತ್ತೀಚೆಗೆ ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರು ತಮ್ಮ ಪ್ರತಿನಿಧಿಗಳಾದ ಸ್ಟೀವ್ ವಿಟ್ಕಾಫ್ ಮತ್ತುಜಾರೆಡ್ಸಂಘರ್ಷ ಸ್ಥಗಿತಕ್ಕೆ ಹೊಸ ಪ್ರಸ್ತಾಪ ಕುಶ್ನರ್ ಅವರನ್ನು ಪಾಕಿಸ್ತಾನಕ್ಕೆ ಕಳುಹಿಸುವ ಯೋಜನೆಯನ್ನು ರದ್ದುಗೊಳಿಸಿದ್ದರು. ಪ್ರಯಾಣ ಸಮಯ ಹೆಚ್ಚು ವ್ಯಥ-'ರ್ಥವಾಗುತ್ತಿದೆ ಎಂದು ಹೇಳಿ ಈ ನಿರ್ಧಾರ ಕೈಗೊಂಡಿದ್ದರು. "ಇರಾನ್ ಮಾತುಕತೆ ಮಾಡಲು ಬಯಸಿದರೆ, ಅವರು ನಮಗೆ ಕರೆ ಮಾಡಿದರೆ ಸಾಕು" ಎಂದು ಟ್ರಂಪ್ ಹೇಳಿದ್ದಾರೆ. ಪಾಕಿಸ್ತಾನ ಮತ್ತು ರಷ್ಯಾ ಮಧ್ಯಸ್ಥಿಕೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಪಾಕಿಸ್ತಾನದಲ್ಲಿ ಮತ್ತೆ ಮಾತುಕತೆ ನಡೆಸಿ, ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಹಾಗೂ ಪ್ರಧಾನಮಂತ್ರಿ ಶಹಾಬಾಜ್ ಶರೀಫ್ ಅವರನ್ನು ಭೇಟಿಯಾಗಿದ್ದಾರೆ. ಇದಾದ ನಂತರ ಅವರು ರಷ್ಯಾಕ್ಕೆ ತೆರಳಿ, ಅಧ್ಯಕ್ಷ ಪುಟೀನ್ ಅವರೊಂದಿಗೆ ಚರ್ಚೆ ನಡೆಸಲು ಸಿದ್ಧರಾಗಿದ್ದಾರೆ. ಇರಾನ್ ನೀಡಿರುವ ಈ ಹೊಸ ಪ್ರಸ್ತಾಪವು ಯುದ್ಧ ವಿರಾಮ ಹಾಗೂ ಜಾಗತಿಕ ಇಂಧನ ಸಂಕಷ್ಟ ನಿವಾರಣೆಗೆ ದಾರಿ ತೆರೆಸುವ ಸಾಧ್ಯತೆ ಇದೆ. ಆದರೆ ಅಣು ಕಾರ್ಯಕ್ರಮದ ವಿಚಾರವನ್ನು ಮುಂದೂಡುವುದು ಅಮೆರಿಕಾಗೆ ಒಪ್ಪಿಗೆಯಾಗುತ್ತದೆಯೇ ಎಂಬುದು ಮುಂದಿನ ಬೆಳವಣಿಗೆಯನ್ನು ನಿರ್ಧ-ರಿಸಲಿದೆ.ಮುಂದಿನ ದಿನಗಳಲ್ಲಿ ಅಮೆ-ರಿಕಾ ಪ್ರತಿಕ್ರಿಯೆ ಹಾಗೂ ಮಾತುಕತೆಗಳ ಪ್ರಗತಿ ಮಹತ್ವ ಪಡೆದುಕೊಳ್ಳಲಿದೆ.

# ಅದ್ದೂರಿಯಾಗಿ ಜರುಗಿದ ದಿಡ್ಡಿ ಬಸವೇಶ್ವರನ ಜೋಡು ರಥೋತ್ಸವ

**ನೈಜ್ಯ ದೇಸೆ ನ್ಯೂಸ್**

ಸಿರವಾರ.ಏ.27- ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಅತ್ತನೂರು ಗ್ರಾಮದ ಐತಿಹಾಸಿಕ ಸುಪ್ರಸಿದ್ಧ ಶ್ರೀ ದಿಡ್ಡಿ ಬಸವೇಶ್ವರನ ಜೋಡು ರಥೋತ್ಸವ ಬಹಳ ವಿಜೃಂಭಣೆಯಿಂದ ಜರುಗಿ-ತು. ಏಕೈಕ ಕೆಂಪು ಕಂತೆಯ ದಿಡ್ಡಿ ಬಸವೇಶ್ವರನ ಜಾತ್ರೆಯಲ್ಲಿ ಅತ್ತನೂರು ಗ್ರಾಮದ ಗುರುಹಿರಿಯರು ಸಡಗರ ಸಂಭ್ರಮದಿಂದ ಸಂತೋಷ ದಿಂದ ಜಾತ್ರೆಯ ತಯಾರಿ ನಡೆಸಿ ವಾದ್ಯಮೇಳ ಗಳೊಂದಿಗೆ ಪೂಜೆ ಪುರಸ್ಕಾರ ದೊಂದಿಗೆ ರಥೋತ್ಸ ನದಲ್ಲಿ ಭಾಗಿಯಾಗಿದ್ದರು ಶ್ರೀ ಷ. ಬ್ರ.ಡಾ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಸಂಸ್ಥಾನಬೃಹನ್ಮಠ ನಿಲಗಲ್ - ಗಣೇಕಲ್ ಶ್ರೀ. ಷ. ಬ್ರ. ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು, ಸಾವಿರ ದೇವರ ಸಂಸ್ಥಾನ ಕಿಲ್ಲೇ ಬೃಹನ್ಮಠ ರಾಯಚೂರು ಶ್ರೀ. ಷ ಬ್ರ ಅಭಿನವ ರಾಚೋಟ ಮಹಾಸ್ವಾಮಿಗಳುಸೋಮವಾರಪೇಟೆ ಹಿರೇಮಠ ಅತ್ತನೂರು-ರಾಯಚೂರು,ಬೂದಿಬಸವ ಸಂಸ್ಥಾನ ಮಠ ಗಟ್ಟೂರು, ಶ್ರೀ ಷ ಬ್ರ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಸಂಸ್ಥಾನ ಬೃಹನ್ಮಠ ನವಲಕಲ್, ಷ.ಬ್ರ. ಅಭಿನದ ರೇಣುಕಾ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು ಸಂಸ್ಥಾನ ಬೃಹನ್ ಮಠ-ನಿಲಗಲ್ ಗಣೇಕಲ್, ಶ್ರೀ ಷ ಬ್ರ ಶಂಭು ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಸಂಸ್ಥಾನ ತೀರ್ಥ ಬೃಹನ್ಮಠ ಸುಲ್ತಾನಪೂರು,ಕಲ್ಲೂರಿನ ಶಂಭುಲಿಂಗ ಮಹಾಸ್ವಾಮಿಗಳು ಶ್ರೀ ಗುರು ಅಡೇಶ್ವರ ಮಠ, ಶ್ರೀ ಕ್ಷೀರಲಿಂಗ ಮಹಾಸ್ವಾಮಿಗಳು ಧರ್ಮಧಿಕಾರಿಗಳು ಶ್ರೀ ಪಾರ್ವತಿ ಪರಮೇಶ್ವರ ದೇವಸ್ಥಾನ ಚೇಗುಂಟ, ಶ್ರೀ ಪರಮಪೂಜ್ಯ ಜಾಗಟಗಲ್ ಶರಣ-ರುಶ್ರೀ ಮಶಿವಾನಂದಯ್ಯ ಸ್ವಾಮಿ ಗುರುಮಠ ಸೇರಿದಂತೆ ಇತರರು ರಥೋತ್ಸವಕ್ಕೆ ಚಾಲನೆ ನೀಡಿದರು ಈ ಸಂದರ್ಭದಲ್ಲಿ ಗ್ರಾಮದ ಗುರುಹಿರಿಯರು ರಾಜಕೀಯ ಗಣ್ಯರು ವಿವಿಧ ಗ್ರಾಮಗಳ ಮುಖಂಡರು ಭಕ್ತರು ಸೇರಿದಂತೆ ವೀರಭದ್ರಯ್ಯ ಸ್ವಾಮಿ ಅಧ್ಯಕ್ಷರು ಶ್ರೀ ದಿಡ್ಡಿ ಬಸವೇಶ್ವರ ಸೇವಾ ಸಮಿತಿ. ನವೀನ್ ಪಾಟೀಲ್ ಕಾರ್ಯದರ್ಶಿಗಳು ಹಾಗೂ ಸಮಿತಿ ವೃಂದದವರು ಉಪಸ್ಥಿತರಿದ್ದರು



# ಬ.ಸಾಲವಾಡಗಿ ಸರ್ಕಾರಿ ಪ್ರೌಢಶಾಲೆ ಮಕ್ಕಳ ಸಾಧನೆ

**ನೈಜ್ಯ ದೇಸೆ ನ್ಯೂಸ್**




ತಾಳಿಕೋಟಿ: ತಾಲೂಕಿನ ಬ.ಸಾಲವಾಡಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು 2025-26 ನೇ ಸಾಲಿನಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಶಾಲೆ ಫಲಿತಾಂಶ ಶೇ.96.62 ರಷ್ಟಾಗಿದೆ. ಕುಮಾರಿ ಭೂಮಿಕಾ ಸತ್ಯಂಪೇಟ 613 (98.08%) ಶಾಲೆಗೆ ಪ್ರಥಮ. ಕುಮಾರ ರಾಮನಗೌಡ ಕೋಳೂರು 605 (96.80%) ದ್ವಿತೀಯ ಹಾಗೂ ಕುಮಾರಿ ಪಲ್ಲವಿ ಸಜ್ಜನ 602 (96.32%) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. 31 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 51 ವಿದ್ಯಾರ್ಥಿಗಳು ಪ್ರಥಮ ದರ್ಜೆ, 4 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಹಾಗೂ ಇಬ್ಬರು ವಿದ್ಯಾರ್ಥಿಗಳು ಪಾಸ್ ಕ್ಲಾಸ್ ಆಗಿದ್ದಾರೆ. ಒಟ್ಟು 92 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಇವರಲ್ಲಿ 88 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷರು, ಸರ್ವ ಸದಸ್ಯರು, ಮುಖ್ಯೋಪಾಧ್ಯಾಯಿನಿ, ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದೆ.

# ತೋಟಗಾರಿಕೆ ಇಲಾಖೆ ಜಾಗ ಒತ್ತುವರಿ,ತೆರವಿಗೆ ಗಡುವು




**ನೈಜ್ಯ ದೇಸೆ ನ್ಯೂಸ್**

ಸಿಂಧನೂರು: - ನಗರದ ಹೃದಯಭಾಗದಲ್ಲಿರುವ ತೋಟಗಾ-ರಿಕೆ ಇಲಾಖೆಯ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿಗೆ ಬಲವಂತರು ಅತಿಕ್ರಮಿಸಿದ್ದಾರೆ ಇನ್ನೂ ಮೂರ್ನಾಲ್ಕು ದಿನಗಳಲ್ಲಿ ಅತಿ ಕ್ರಮಿಸಿಕೊಂಡವರನ್ನು ಬಿಡಿಸಿ ಹದ್ದು ಬಸ್ತು ಹಾಕಬೇಕು ಇಲ್ಲದಿದ್ದಲ್ಲಿ ಅಧಿಕಾ-ರಿಗಳ ವಿರುದ್ದ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಹೋರಾಟ ಮುಖ್ಯಸ್ಥ ದುರುಗಪ್ಪಹನುಮಂತಪ್ಪ ಪೂಜಾರ ಅಧಿಕಾ-ರಿಗಳಿಗೆ ಸಮಿತಿ ವತಿಯಿಂದ ಗಡುವು ನೀಡಿದರು.ಸೋಮವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿದರು. ಪ್ರವಾಸಿ ಮಂದಿರದ ಎದುರಿಗೆ ಇರುವತೆ-ಟಗಾರಿಕೆ ಇಲಾಖೆಯ ದಕ್ಷಿಣ ಮತ್ತು ಪಶ್ಚಿಮದಿಕ್ಕಿಗೆ ಹಣವಂತರು ಅತಿಕ್ರಮಿಸಿದ್ದು ಅದನ್ನು ತೆರವುಗೊಳಿಸಿ ಹಾಗೂ ಜಿಲ್ಲಾಧಿಕಾರಿ ಗಳು ಸಭೆ ನಡೆಸಬೇಕು. 15 ದಿನಕ್ಕೆ ಧರಣಿ ಮುಂದುವರಿದಿದ್ದು ಪ್ರತಿಭಟನೆ ಸ್ಥಳಕ್ಕೆ ತೋಟಗಾರಿಕೆ ಇಲಾಖೆ ಜಂಟಿನಿರ್ದೇಶಕ ಮಹಮ್ಮದ್ ಅಲಿ ಬೇಟಿ ನೀಡಿದ್ದರು. ಸಮಸ್ಯೆಗಳಿಗೆ ಸ್ಪಂದಿಸದೆ ಹೋಗಿದ್ದಾರೆ. ಈ ಕುರಿತು ಶಾಸಕರು ಮುಖ್ಯಮಂತ್ರಿಸಿದ್ದರಾಮಯ್ಯ ಅವರಿಗೆ ಬೀದಿ ಬದಿ ವ್ಯಾಪಾರಸ್ಥರಿಗೆ 10/10 ಜಾಗ ಬಾಡಿಗೆ ಪಡೆದು ಕೊಡುವಂತೆ ಹೇಳಿದ್ದಾರೆ ಇದು ಒಳ್ಳೆಯ ಬೆಳವಣಿಗೆ ಎಂದರು. ಹೈಕೋರ್ಟ್ ಮತ್ತು ಭೂ ಕಬಳಿಕೆ ಬಳಿಕೆ ನಿಷೇಧ ನಿಷೇಧ ನ್ಯಾಯಾಲಯವು ಒತ್ತುವರಿತೆರವುಗೊಳಿಸುವಂತೆ ಆದ-'ಶ ಮಾಡಿದೆ. ಅದನ್ನು ಪಾಲಿಸಬೇಕಾದ ಅಧಿಕಾರಿಗಳು ನಗರದಲ್ಲಿ ಭಾಗಶ: ಒತ್ತುವರಿಯಾಗಿದೆ ಅದನ್ನು ಬಿಡಿಸಲು ಯಾಕೆ ಮುಂದಾಗುತ್ತಿಲ್ಲ ಎಂದು ಪ್ರಶ್ನಿಸಿದರು.ಈ ಸಂದರ್ಭದಲ್ಲಿ ಎಸ್. ದೇವೇಂದ್ರಗೌಡ,ಬಿ.ಎನ್‌ಯರದಿಹಾಳ, ಖಾಸಿಂ ಸಾಬ, ರಸೂಲ್ ಸಾಬ್ ಹುಸೇನ್ ಸಾಬ ಅನೇಕರಿದ್ದರು.

# ಸಾರ್ವಜನಿಕರು ಯಾವುದೇ ಜ್ವರವಿರಲಿ, ತಕ್ಷಣ ರಕ್ತಲೇಪನ ಪರೀಕ್ಷೆ ಮಾಡಿಸಿ, ಮಲೇರಿಯಾ ತಡೆಗೆ ಸಹಕರಿಸಿ:

**ನೈಜ್ಯ ದೇಸೆ ನ್ಯೂಸ್**




ರಾಯಚೂರು: ಸಾರ್ವಜನಿಕರು ಯಾವುದೇ ಜ್ವರವಿರಲಿ, ಮೊದಲು ರಕ್ತಲೇಪನ ಪರೀಕ್ಷೆ ಮಾಡಿಸಬೇಕು. ಇದರಿಂದ ಮಲೇರಿಯಾ ಸೇರಿದಂತೆ ಸೋಂಕಿತ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ರೋಗಗಳ ನಿಯಂತ್ರಣಕ್ಕೆ ಸಾಧ್ಯವಾಗುವುದು ಎಂಬುದನ್ನು ವ್ಯಾಪಕ ಜನಜಾಗೃತಿಗಾಗಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಹಾಗೂ ಪಾಲಿಕೆ ಆರೋಗ್ಯಾಧಿಕಾರಿ ಡಾ ಮಹಮ್ಮದ್ ಶಾಕೀರ್ ಮನವಿ ಮಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರಪಾಲಿಕೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ರಾಯಚೂರು, ಇವರ ಮೂಲಕ ಪಾಲಿಕೆಯ ಸಭಾ ಭವನದಲ್ಲಿ ಹಮ್ಮಿಕೊಂಡ ವಿಶ್ವ ಮಲೇ-ರಿಯಾ ದಿನದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ನಗರದ ಎಲ್ಲ ಪ್ರದೇಶಗಳಲ್ಲಿ ಮನೆಯ ಸುತ್ತಲಿನ ಜಾಗಗಳಲ್ಲಿ ಶಾಶ್ವತ ನೀರು ನಿಲ್ಲುವ ಸ್ಥಳಗಳಿದ್ದರೆ, ನೀರು ನಿಲ್ಲದಂತೆ ನಿಗಾ ವಹಿಸಲು ಜನತೆಗೆ ಜಾಗೃತಿ ನೀಡಲು ತಿಳಿಸಿದರು. ಮುಖ್ಯವಾಗಿ ಮಲೇರಿಯಾ ಹರಡುವ ಅನಾಫಿಲಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ಗುರ್ತಿಸುವುದು, ಕೀಟ ನಾಶಕ ಸಿಂಪರಣೆಗೆ ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದು ತಿಳಿಸಿದರು.

ಜಿಲ್ಲಾ ಡಿಪಿಡಿಓ ಡಾ ಚಂದ್ರಶೇಖರಯ್ಯ ಸ್ವಾಮಿ ಮಾತನಾಡಿ, ಮಲೇರಿಯಾ ಜ್ವರವು ಪ್ಲಾಸ್ಮೋಡಿಯಂ ಎಂಬ ಪರಾವಲಂಭಿ ಸೂಕ್ಷ್ಮಾಣುವಿನಿಂದ ಉಂಟಾಗಬಹುದಾಗಿದ್ದು, ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಮಲೇರಿಯಾ ರೋಗ ಲಕ್ಷಣಗಳು: ಚಳಿ, ನಡುಕ, ಬಿಟ್ಟು ಬಿಟ್ಟು ಜ್ವರ ಬರುವುದು, ವಾಕ-ರಿಕೆ, ಮೈ ಬೆವರುವುದು ಲಕ್ಷಣಗಳಾಗಿವೆ. ಈ ಲಕ್ಷಣಗಳು ಕಂಡು ಬಂದಲ್ಲಿ ಮಲೇರಿಯಾ ಜ್ವರ ಇರಬಹುದು ಎಂದು ಭಾವಿಸಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ಲೇಪನ ಪರೀಕ್ಷೆಗೆ ಒಳಪಟ್ಟು ಖಚಿತಪಟ್ಟಲ್ಲಿ ಸೂಕ್ತ ಉಚಿತ ಚಿಕಿತ್ಸೆ ಪಡೆದು ಗುಣ ಹೊಂದಬಹುದಾಗಿದೆ ಎಂದು ಹೇಳಿದರು.

ನಿಯಂತ್ರಣಕ್ಕೆ ಸಹಕಾರ: ಅಲ್ಲದೆ ಮಲೇರಿಯಾ ಪ್ರಕರಣಗಳ ತಡೆಗೆ ಮನೆಯ ಒಳಭಾಗ ಆರೋಗ್ಯ ಇಲಾಖೆಯಿಂದ ಕೈಗೊಳ್ಳುವ ಕೀಟನಾಶಕ ಸಿಂಪರಣೆಗೆ ಸಾರ್ವಜನಿಕರು ಸಹಕರಿಸಬೇಕು. ಸ್ವಯಂ ರಕ್ಷಣಾ ಕ್ರಮಗಳಾದ ಮಲಗುವಾಗ ಸೊಳ್ಳೆ ಪರದೆ ಬಳಕೆ ಮಾಡಬೇಕು. ಕಿಟಕಿಗಳಿಗೆ ಸೊಳ್ಳೆಗಳು ನುಸುಳದಂತೆ ಜಾಲರಿ ಅಳವಡಿಸುವುದು. ಆರೋಗ್ಯ ಇಲಾಖೆಯಿಂದ ನೀಡಲ್ಪಡುವ ಲಾರ್ವಹಾರಿ ಗಪ್ಪಿ ಮತ್ತು ಗಂಬೂಷಿಯಾ ಮೀನುಗಳನ್ನು ಶಾಶ್ವತವಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಬಿಡಲು ಉಚಿತವಾಗಿ ಪಡೆಯಬಹುದಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪಾಲಿಕೆಯ ಪರಿಸರ ಅಭಿಯಂತರರು ಜಯಪಾಲರೆಡ್ಡಿ, ಬಿಹೆಚ್‌ಇಓ ಸರೋಜಾ ಕೆ, ಎಮ್‌ಟಿಎಸ್ ಸಂಧ್ಯಾ ಸೇ-ರಿದಂತೆ ಮಹಾನಗರ ಪಾಲಿಕೆ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯವರು, ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಸಾವಿತ್ರಿ ಬಾಯಿ ಪುಲೆ
ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಪುಲೆ
ಹೆಣ್ಣು ಮಕ್ಕಳಿಗಾಗಿ ಮೊದಲ ಶಾಲೆ ತೆರೆದ ವಿದ್ಯೆ ಮಾತೆ
ಪುಲೆ

8ನೇ ವಯಸ್ಸಿಗೆ ಜ್ಯೋತಿ ಬಾ ಪುಲೆಗೆ ಸತಿಯಾಗಿ ನಿಂದು
ಬಾಲ್ಯ ವಿವಾಹ ಕೇಶಮಂಡನಗಳ ವಿರುದ್ಧ ಗುಡುಗಿದರು

ಶಿಶು ಕೇಂದ್ರ ತೆರೆದು ಅನಾಥ ಮಕ್ಕಳಿಗೆ ಅಮ್ಮನಾದವರು
ತಳ ಸಮುದಾಯದ ಹೆಣ್ಣು ಮಕ್ಕಳಿಗೆ ಮೊದಲ ಶಾಲೆ
ತೆರೆದು

ಕೂಲಿಕಾರ್ಮಿಕರ ಅನಕೂಲಕ್ಕೆಂದೆ ರಾತ್ರಿ ಶಾಲೆ ಮಾಡಿ
ಅಕ್ರಮ ಗರ್ಭಿಣಿ, ವಿದಿವೆಯರಿಗೆ ಪುನರ್ವಸತಿ ಕಲ್ಪಿಸಿದರು

ಜ್ಯೋತಿ ಬಾ ಅವರ ಭಾಷಣಗಳು ಕರ್ಜೆ ಅವರ ಕೃತಿಯು
ಭವನ ಕಾಶಿ ರತ್ನಾಕರ, ಕಾವ್ಯ ಪುಲೆಗಳನೂ ಬರೆದು
ಮಾನವೀಯತೆ ಮಹಾಧರ್ಮವೆಂದು ಬಾಳಿ ಬದುಕಿದವರು
ಕಷ್ಟದೊಳಗಿನ ವಜ್ರವು ಇವರು ನೊಂದವರ ಧನಿಯು

ಯಶವಂತನೆಂಬ ದತ್ತು ಪುತ್ರನನ್ನು ಸಾಕಿ ಸಲುಹಿದವರು
ತಾಯಿಯ ತಾಳ್ಮೆಗೆ ತೂಕವಿಲ್ಲವೆಂದು ಜಗಕೆ ಸಾರಿದವರು
ಸಹನೆಯನ್ನೆ ದೊಡ್ಡ ಆಸ್ತಿಯೆಂದು ಸಹಿಕೊಂಡ ಗುರುವು
ಸಮಾಜ ಸೇವೆ ಮಾಡಿ ಜಗದಿ ಶಾಶ್ವತ ನೆಲೆಯ ನಿಂತವರು

ಪತಿಯ ಬೆಂಬಲದಿ ಲೋಕದ ಮಾತಿಗೆ ಕಿವಿಯ
ಕೊಡದವರು

ಮಹಾರಾಷ್ಟ್ರದ ಪ್ರತಿಭೆ ಜಲಾಶಯ ನಿರ್ಭಿತೆ ಪುಲೆ ಇವರು
ಕ್ಷಾಮದ ಕಾಲಕ್ಕೆ ಸ್ವತಃ ಜನರ ಸೇವೆಗೆ ನಿಂತವರು ಪ್ಲೇಗು
ಬಂದವರ ಹಾರೈಕೆಯಲಿ ಪ್ರಾಣವ ಬಿಟ್ಟವರು

ತುಳಸಿದಾಸ ಬಿ ಸಹ ಶಿಕ್ಷಕರು ಸಿಂಧನೂರು

# ದಸಾಪ ಕಲಬುರ್ಗಿ ವಿಭಾಗೀಯ ಸಂಯೋಜಕರಾಗಿ ಹೆಚ್.ಎಫ್.ಮಸ್ಕಿ ನೇಮಕ

ನೈಜ್ಯ ದೆಸೆ ನ್ಯೂಸ್

ದಲಿತ ಸಾಹಿತ್ಯ ಪರಿಷತ್ತು (ರಿ) ರಾಜ್ಯ ಘಟಕದ ವತಿಯಿಂದ ಕಲ್ಬುರ್ಗಿ ವಿಭಾಗೀಯ ಸಂಂ–ಯೋಜಕರಾಗಿ ಸಾಹಿತ್ತಿಕ ಹಾಗೂ ಸಂಘಟಕರಾದ ಸಿಂಧನೂರಿನ ಹೆಚ್.ಎಫ್.ಮಸ್ಕಿ ಅವರನ್ನು ನೇಮಕ ಮಾಡಲಾಗಿದೆ ಎಂದು ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ.ಅರ್ಜುನ್ ಗೊಳಸಂಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹೆಚ್.ಎಫ್.ಮಸ್ಕಿ ಅವರು 1960 ರಲ್ಲಿ ಹುನಗುಂದಾದಲ್ಲಿ ಜನಿಸಿದರು. ಬಡತನದಲ್ಲಿ ನೊಂದು ಬಂದು, ಅಭ್ಯಾಸ ಮಾಡಿರುವ ಇವರು ನೌಕರಿಗಾಗಿ ಸಿಂಧನೂ–ರಿನ ಶ್ರೀವೆಂಕಟೇಶ್ವರ ಪ್ರೌಢ ಶಾಲೆಗೆ ದೈಹಿಕ ಶಿಕ್ಷಕರಾಗಿ ನೇಮಕಗೊಂಡರು. ಹಲವಾರು ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ. ಕನ್ನಡ ಸಾಹಿತ್ಯ ದಲಿತ ಮತ್ತು ಬಂಡಾಯ ಸಾಹಿತ್ಯ ಹಾಗೂ ಶರಣ ಸಾಹಿತ್ಯ ಸಾಂಸ್ಕೃತಿಕ ಚಿಂತನೆ ಮತ್ತು ಸಾಮಾಜಿಕ ಸೇವಾ ಕ್ಷೇತ್ರಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದು, ರಾಯಚೂರು ಜಿಲ್ಲೆಯಲ್ಲಿ ಉತ್ತಮ ಸಂಘಟಕರಾಗಿ ಗುರುತಿಸಿಕೊಂಡಿದ್ದಾರೆ. ಸಾಹಿತ್ಯಕ್ಷೇತ್ರದಲ್ಲಿ ಕಹಳೆ ಮತ್ತು ಅಂತರಂಗ ಎನ್ನುವ ಎರಡು ಕಾವ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರ ಸಾಹಿತ್ಯ ಮತ್ತು ಸಾಮಾಜಿಕ ಸೇವೆಯನ್ನು ಗುರುತಿಸಿ ನವದೆಹಲಿಯಿಂದ ಅಂದಿನ ರಾಷ್ಟ್ರಪತಿಗಳಾಗಿದ್ದ ಶಂಕರ್ ದಯಾಳ್ ಶರ್ಮ ಅವರಿಂದ ಡಾ.ಬಿ.ಆರ್.ಅಂಬೇಡ್ಕರ್ ಅವಾರ್ಡ್, ಭಾರತ ಸೇವಾದಳದ ಜಿಲ್ಲಾ ಪ್ರಶಸ್ತಿ, ಚಲವಾದಿ ಮತ್ತು ಮಾದಿಗ ನೌಕರರ ಸಂಘದ ವತಿಯಿಂದ ಜಿಲ್ಲಾಮಟ್ಟದ ಸೇವಾ ರತ್ನ ಪ್ರಶಸ್ತಿ, ತಾಲೂಕು ಮಟ್ಟದ ಉತ್ತಮ ಶಿಕ್ಷಕರ ರತ್ನ ಪ್ರಶಸ್ತಿ ಅಲ್ಲದೆ, ಸರಕಾರ ಮತ್ತು ವಿವಿಧ ಸಂಘ ಸಂಸ್ಥೆಗಳಿಂದ ಗೌರವ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಚಲವಾದಿ ನೌಕರರ ಸಂಘದ ತಾಲೂಕು ಅಧ್ಯಕ್ಷರಾಗಿ ದಲಿತ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಪ್ರಸ್ತುತ ಸಿಂಧನೂರು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹೂಗಾರ ಮತ್ತು ಡೆತ್ ಸರ್ಟಿಫಿಕೇಟ್ ಎಂಬ ಮೊದಲಾದ ಚಲನಚಿತ್ರದಲ್ಲಿ ಪೋಷಕ ನಟರ ಪಾತ್ರವನ್ನು ವಹಿಸಿದ್ದಾರೆ. ಇವರ ಸಾಧನೆ ಹಾಗೂ ಸಂಘಟನಾ ಸಾಮರ್ಥ್ಯ ಹಾಗೂ ಸಾಹಿತಿಕ ಸೇವೆಯನ್ನು ಗಮನದಲ್ಲಿಟ್ಟುಕೊಂಡು ದಸಾಪ ರಾಜ್ಯ ಘಟಕದ ಪದಾಧಿಕಾರಿಗಳು ಚರ್ಚಿಸಿ, ಈ ಮಹತ್ವದ ಜವಾಬ್ದಾರಿಯನ್ನು ವಹಿಸಿದ್ದಾರೆಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ವಿಪಿಎಂ ಪ್ರೌಢಶಾಲೆ ವಿದ್ಯಾರ್ಥಿಗಳ ಉತ್ತಮ ಸಾಧನೆ

ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಪಟ್ಟಣದ ಪ್ರತಿಷ್ಠಿತ ವಿಪಿಎಮ್ ಮತ್ತು ಸೆಕ್ರೆಡ್ ಹಾರ್ಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋ–ರಿದ್ದಾರೆ. ಫಲಿತಾಂಶ 97% ಬಂದಿದೆ. ಪರೀಕ್ಷೆಗೆ ಒಟ್ಟು 29 ವಿದ್ಯಾರ್ಥಿಗಳು ಹಾಜರಾಗಿದ್ದು ಎಲ್ಲರೂ ಉತ್ತೇಣರಾಗಿದ್ದಾರೆ.

625 ಕ್ಕೆ 593 ಅಂಕ ಪಡೆದ ಕುಮಾರಿ ಸಂಜನಾ ಬಡದಾಳಿ ಪ್ರಥಮ ಸ್ಥಾನ, 625 ಕ್ಕೆ 591ಅಂಕ ಪಡೆದು ಶ್ವೇತಾ ಸುಳೇಭಾವಿ ಹಾಗೂ ಸುಮಯ್ಯ ಕೌಸರ್ ಜಮಾದಾರ ದ್ವಿತೀಯ ಸ್ಥಾನ ಮತ್ತು 625 ಕ್ಕೆ 558



ಅಂಕ ಪಡೆದ ಗಿರಿಜಾ ಗೋನಾಳ ತೃತೀಯ ಸ್ಥಾನ ಪಡೆದಿದ್ದಾರೆ. ಕನ್ನಡ ವಿಷಯದಲ್ಲಿ ಒಬ್ಬ ವಿದ್ಯಾರ್ಥಿ 100/100 ಅಂಕ, ಹಿಂದಿ ವಿಷಯದಲ್ಲಿ 8 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದುಕೊಂಡಿದ್ದರೆ. ಒಬ್ಬ ವಿದ್ಯಾರ್ಥಿ ಸಮಾಜ ವಿಜ್ಞಾನದಲ್ಲಿ 100ಕ್ಕೆ 100 ಅಂಕ ಪಡೆದುಕೊಂಡು ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಶಾಲೆಯ ವ್ಯವಸ್ಥಾಪಕ, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

# ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಿಹಿ ಹಂಚಿ ಹರ್ಷ ವ್ಯಕ್ತಪಡಿಸಿದ ಅಬಕಾರಿ ಸಚಿವ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ದಲಿತ ಸಮುದಾಯದ ನೂರಾರು ಮುಖಂಡರೊಂದಿಗೆ ಸೇರಿ ಸಚಿವ ಆರ್ ಬಿ ತಿಮ್ಮಾಪುರವರು ಒಳ ಮೀಸಲಾತಿ 30 –40 ವರ್ಷ ಹಿಂದಿನಿಂದ ಹೋರಾಟ ನಡೆದಂತದ್ದು ಹಿಂದೆ ಯಾವುದೇ ಸರ್ಕಾರ ಮಾಡದಂತ ಕಾರ್ಯ ನುಡಿದಂತೆ ನಡೆದ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯಗೆ.

ಸಿಹಿ ಹಂಚಿ ಸಂಭ್ರಮ ಸಡಗರ ವ್ಯಕ್ತ ಪಡಿಸಿದರು ಒಳಮಿಸಲಾತಿ ಜಾರಿಯ ಐತಿಹಾಸಿಕ ತಿರ್ಮಾನ ಕೈಗೊಂಡಿರುವ ಕಾರಣ



ನೂರಾರು ದಲಿತ ಸಮುದಾಯದ ಮುಖಂಡರು ಪಾಲ್ಗೊಂಡಿದ್ದು ಎಲ್ಲರೂ ಸೇರಿ ಸಿಹಿ ಹಂಚಿ ಹರ್ಷ ವ್ಯಕ್ತಪಡಿಸಿದ ಅಬಕಾರಿ ಸಚಿವ ಆರ್ ಬಿ ತಿಮ್ಮಾಪುರ ಹಾಗೂ ದಲಿತ ಸಮುದಾಯದ ನೂರಾರು ಮುಖಂಡರೊಂದಿಗೆ ಹರ್ಷ ವ್ಯಕ್ತಪಡಿಸಿದರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ವ ಜನಾಂಗ ಒಪ್ಪುವಂತೆ ಸರ್ವಾ ನುಮತದಿಂದ ಈ ನಿರ್ಣಯ ಕೈಗೊಳ್ಳವಲಿ ಯಶಸ್ವಿ ಆಗಿದ್ದಾರೆ ದಲಿತ ಸಮುದಾಯಕ್ಕೆ ಬಹುದೊಡ್ಡ ನ್ಯಾಯ ಒದಗಿಸಿದ್ದಾರೆ ನಡೆದಂತೆ ನುಡಿದು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ ಎಂದು ಸಮುದಾಯದ ಮುಖಂಡರು ಹರ್ಷ ವ್ಯಕ್ತಪಡಿಸಿದರು.

## ಕಂಪ್ಲಿಯಲ್ಲಿ ಸಿಲಿಂಡರ್ ಬ್ಲಾಸ್ಟ್ ಸಾಮಾನುಗಳು ಭಸ್ಮ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ, ಜಿಲ್ಲೆಯ



ಕಂಪ್ಲಿ ಪಟ್ಟಣದ 4ನೇ ವಾರ್ಡ್ನಲ್ಲಿ ಯಲ್ಲಪ್ಪ ಅವರ ಮನೆಯಲ್ಲಿ ನಿನ್ನೆ ಸಿಲಿಂಡರ್ ಸ್ಫೋಟ ಸಂಭವಿಸಿ ಮನೆಗೆ ವ್ಯಾಪಕ ಹಾನಿಯಾಗಿದೆ. ಸ್ಫೋಟದ ತೀವ್ರತೆಗೆ ಮನೆಯಲ್ಲಿದ್ದ ಸಾಮಾನುಗಳು ಸಂಪೂರ್ಣ ಸುಟ್ಟು ಕರಕಲಾಗಿವೆ.

ಅಡುಗೆ ಅನಿಲ ಸಿಲಿಂಡರ್ ಸ್ಫೋಟ ಗೊಂಡ ಪರಿಣಾಮ ಕ್ಷಣಾರ್ಧದಲ್ಲೇ ಬೆಂಕಿ ವ್ಯಾಪಿಸಿಕೊಂಡು ಮನೆಯನ್ನು ಆವ–ರಿಸಿತು. ಬೆಂಕಿಯ ಕೆನ್ನಾಲಿಗೆಗೆ ಮನೆಯ ಮೇಲ್ಚಾವಣಿ ಸಂಪೂರ್ಣ ಸುಟ್ಟು ಹೋಗಿದ್ದು, ಒಳಗಿದ್ದ ಪೀಠೋಪಕರಣಗಳು, ಗೃಹೋಪ ಯೋಗಿ ವಸ್ತುಗಳು ಹಾಗೂ ಇತರೆ ಸಾಮಾನುಗಳು ಭಸ್ಮವಾಗಿವೆ.

ಘಟನೆ ನಡೆದ ತಕ್ಷಣ ಅಗ್ನಿಶಾಮಕ ದಳ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಕೆಲ

ಕಾಲ ಕಾರ್ಯಾಚರಣೆ ನಡೆಸಿದ ಬಳಿಕ ಬೆಂಕಿಂ–ಋನ್ನು ನಿಯಂತ್ರಣಕ್ಕೆ ತಂದು ಮತ್ತಷ್ಟು ಅನಾಹುತ ತಪ್ಪಿಸಲಾಯಿತು.

# ಕೆರೂರು ಪಿಎಸ್ಐ ಹಾಗೂ ಕಾನ್ಸ್ಟೇಬಲ್ ಲೋಕಾಯುಕ್ತ ಬಲೆಗೆ

ನೈಜ್ಯ ದೆಸೆ ನ್ಯೂಸ್

ಬಾಗಲಕೋಟ ಜಿಲ್ಲೆಯ ಬದಾಮಿ ತಾಲೂಕಿನ ಕೆರೂರದಲ್ಲಿ ಪಿಎಸ್ಐ ಭೀಮಪ್ಪ ರಬಕವಿ ಹಾಗೂ ಕಾನ್ಸ್ಟೇಬಲ್ ಸಂತೋಷ್ ಬಿರಾದಾರ್ ಲೋಕಾಯುಕ್ತಗೆ ಸಿಕ್ಕಿಬಿದ್ದ ವ್ಯಕ್ತಿಗಳು.

ಮುತ್ತಪ್ಪ ನಾಯ್ಕರ ಎನ್ನುವ ನ ಮೇಲೆ ಇಸ್ಪೀಟ್ ಆಟ ಬಡ್ಡಿ ಆಟ ಕಾನೂನುಬಾಹಿರು ಎಂದು ಕೇಸ್ ಹಾಕುವದಾಗಿ ಬೆದರಿಕೆಯನ್ನು ಕೊಟ್ಟು ಅವನಲ್ಲಿದ್ದಂತ ವಾಹನವನ್ನು ತೆಗೆದುಕೊಂಡು ಬಂದಿದ್ದರು ಆ ವಾಹನ ಬಿಡಿಸಿಕೊಂಡು ಹೋಗಲು 1,70,000ರೂಪಾಯಿಗಳನ್ನು ಬೇಡಿಕೆ ಇಟ್ಟಿದ್ದರು ಮುತ್ತಪ್ಪ ನಾಯಕರನಿಗೆ ಒಂದು ಲಕ್ಷದ ಎಪ್ಪತ್ತು ಸಾವಿರ ರೂಪಾಯಿಗಳು ಜಮಾ ಆಗದೆ ಕಾರಣ ನೇರವಾಗಿ




ಬಾಗಲಕೋಟ್ ಲೋಕಾಯುಕ್ತ–ರಿಗೆ ಮನವಿಯನ್ನು ಸಲ್ಲಿಸಿದನು.

ಅವನ ಮನವಿಯ ಪ್ರಕಾರ ಕೆರೂರು ಪಿಎಸ್ಐ ಹಾಗೂ ಕಾನ್ಸ್ಟೇಬಲ್ ಗೆ ತನಿಖೆಗೆ ತೆಗೆದುಕೊಂಡಿದ್ದಾರೆ. ಮುತ್ತಪ್ಪ ನಾಯ್ಕರ ಹಾಗೂ ಪಿಎಸ್ಐ ದೂರವಾಣಿಯ ಸಂಭಾಷಣೆಯನ್ನು ಸೆರೆಹಿಡಿದು ಮುತ್ತಪ್ಪ ನಾಯ್ಕರ ಅವರು ಒಂದು ಲಕ್ಷದ ಎಪ್ಪತ್ತು ಸಾವಿರ ರೂಪಾಯಿಗಳನ್ನು ಠಾಣೆಗೆ ಕೊಡಲು ಹೋದಾಗ ಕಾನ್ಸ್ಟೇಬಲ್ ಸಂತೋಷ್ ಬಿರಾದಾರ್ ಅವರು ಮೂಲಕ ಹಣ ಪಡೆಯುವ ಸಮಯದಲ್ಲಿ ಲೋಕಾಯುಕ್ತರು ದಾಳಿಯನ್ನು ನಡೆಸಿ ಸರಿಯಾದ ಸಮಯದಲ್ಲಿ ರೆಡ್ ಹ್ಯಾಂಡ್ ಆಗಿ ಸೆರೆ ಹಿಡಿಯಲಾಗಿದೆ. ಊರಿನ ಜನ ಈ ವಿಷಯ ತಿಳಿದಂತೆ ಪಟಾಕ್ಷಿ ಸಿಡಿಸಿ ಸಂಭ್ರಮಿಸಿದರು.

# ಸುಧಾಕರ್ ಸ್ಥಿತಿ ಗಂಭೀರ: ಕೆಲವರು ಇಂತಹ ಸಂದರ್ಭ ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ಎಕ್ಸ್‌ಪರ್ಟ್; HDK ಹೀಗೆ ಹೇಳಿದ್ದು ಯಾರಿಗೆ?

ನೈಜ್ಯ ದೆಸೆ ನ್ಯೂಸ್

ಸುಧಾಕರ್ ಸ್ಥಿತಿ ಗಂಭೀರ: ಕೆಲವರು ಇಂತಹ ಸಂದರ್ಭ ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ಎಕ್ಸ್‌ಪರ್ಟ್; ಊಆಏ ಹೀಗೆ ಹೇಳಿದ್ದು ಯಾರಿಗೆ?

ಚಿತ್ರದುರ್ಗ: ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಕೆಲವರು ಇಂತಹ ಸಂದರ್ಭವನ್ನು ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ಎಕ್ಸ್‌ಪರ್ಟ್ ಇದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಪರೋಕ್ಷವಾಗಿ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.ಸಚಿವ ಸುಧಾಕರ್ ಅವರು ಶ್ವಾಸಕೋಶದ ಸೋಂಕಿನಿಂದ





ಬಳಲುತ್ತಿದ್ದು, ಬೆಂಗಳೂರಿನ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಿನ್ನೆಯಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಸ್ಪತ್ರೆಗೆ ಭೇಟಿ ನೀಡಿ, ಸುಧಾಕರ್ ಅವರ ಆರೋಗ್ಯ ವಿಚಾರಿಸಿದ್ದಾರೆ. ಇದರ ಬೆನ್ನಲ್ಲೇ ಇಂದು ಚಿತ್ರದುರ್ಗದ ಖಾಸಗಿ ಕಾರ್ಯಕ್ರಮದಲ್ಲಿ ಮಾತನಾಡಿದ ಕುಮಾರಸ್ವಾಮಿ ಅವರು, ಸಚಿವ ಸುಧಾಕರ್ ಅವರು ಸಾವು ಬದುಕಿನ ನಡುವೆ ಹೋರಾಟ ನಡೆಸ್ತಿದ್ದಾರೆ. ಈ ವೇಳೆ ನಾನು ಜೆಡಿಎಸ್ ಸ್ಥಾನದ ಬಗ್ಗೆ ಚರ್ಚೆ ಮಾಡಲ್ಲ. ಹಿರಿಯೂರು ಸೇರಿದಂತೆ ಬೇರೆ ಕ್ಷೇತ್ರದ ಬಗ್ಗೆಯೂ ಮಾತಾಡಲ್ಲ. ಆದರೆ ಆಸ್ಪತ್ರೆಯ ಒಳಗೆ ಏನು ನಡೆಯುತ್ತಿದೆ ಎಂಬುದನ್ನು ನೋಡಬೇಕು. ಆ ವ್ಯಕ್ತಿ ಎಷ್ಟು ನೋವು ಅನುಭವಿಸುತ್ತಿದ್ದಾನೋ ಪಾಪ. ಯಾವ ಕಾರಣಕ್ಕೆ ಕೆಲ ವಿಷಯ ಮುಚ್ಚಿಟ್ಟಿದ್ದಾರೆ ಎಂಬುದು ತಿಳಿಯಬೇಕು. ಆ ವ್ಯಕ್ತಿಯಿಂದ ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಮುಚ್ಚಿಡಲಾಗಿದೆಯೇ? ಎಂಬ ಅನುಮಾನ ವ್ಯಕ್ತಪಡಿಸಿದರು.

## ನೈಜ್ಯ ದೆಸೆ
## ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕಾರುಣ್ಯಾಶ್ರಮ ಸಮಾಜ ಸೇವಕರಿಗೆ ಪಾಠಶಾಲೆ ಇದ್ದಂತೆ: ಸೋಮನಾಥ ಶಿವಾಚಾರ್ಯ ಸ್ವಾಮಿ

ನೈಜ್ಯ ದೆಸೆ ನ್ಯೂಸ್

ನಗರದ ಕಾರುಣ್ಯಾಶ್ರಮದಲ್ಲಿ ಖಜಾಂಚಿಯಾಗಿದ್ದ ತಾಲೂಕಿನ ಹರೇಟನೂರು ಗ್ರಾಮದ ದಿ.ಸಂಗನಗೌಡ ಮಾಲಿಪಾಟೀಲ್ ಕೆಂಪಲಿಂಗನಗೌಡ್ರು ಇವರ ಪುಣ್ಯಾರಾಧನೆ ಕಾರ್ಯಕ್ರಮ ಹರೇಟನೂರಿನ ಕೆಂಪಪಲಿಂಗನಗೌಡ್ರು ಕುಟುಂಬದಿಂದ ಮೂರನೇ ಮೈಲ್ ಕ್ಯಾಂಪಿನ ಜಗದ್ಗುರು ರಂಭಾಪುರಿ ಖಾಸಾ ಶಾಖಾ ಮಠದ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳ ಪಾದಪೂಜೆಯೊಂದಿಗೆ ದಿ. ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸುವ ಮೂಲಕ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಲಾಯಿತು.

ಇದೇ ವೇಳೆ ಆಶ್ರಮದ ಸಂಸ್ಥಾಪಕ ವೇದಮೂರ್ತಿ ಅಮರಯ್ಯಸ್ವಾಮಿ ಹಾಗೂ ಸಂಸ್ಥೆ ಪದಾಧಿಕಾರಿಗಳ ಒಪ್ಪಿಗೆಯಂತೆ ಕಾರುಣ್ಯ ಸಂಸ್ಥೆ ಖಜಾಂಚಿಗಳನ್ನಾಗಿ ದಿ.ಸಂಗನಗೌಡ ಮಾಲಿಪಾಟೀಲ್ ಕೆಂಪಲಿಂಗನಗೌಡ್ರು ಅವರ ಹಿರಿಯ ಸುಪುತ್ರರಾದ




ಬಸವರಾಜ ಮಾಲಿ ಪಾಟೀಲ್ ಅವರನ್ನು ಖಜಾಂಚಿಗಳನ್ನಾಗಿ ನೇಮಕ ಮಾಡಲಾಯಿತು. ಈ ಸಂದರ್ಭದಲ್ಲಿ ಗಂಗಮ್ಮ ದಿ.ಸಂಗನಗೌಡ ಮಾಲಿ ಪಾಟೀಲ್ ಅವರಿಗೆ ಶ್ರೀಗಳು ಆಶೀರ್ವದಿಸಿದರು. ನಂತರ ಮೂರನೇ ಮೈಲ್ ಕ್ಯಾಂಪಿನ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಈ ಸಂಸ್ಥೆಯ ಖಜಾಂಚಿಗಳಾದ ಸಂಗನಗೌಡ ಅವರು ಅತಿ ಹೆಚ್ಚು ವಿದ್ಯಾವಂತರಾಗಿ ಖಜಾಂಚಿಗಳಾಗಿ ಸಂಸ್ಥೆಯಲ್ಲಿ ಸಿಬ್ಬಂದಿಗಳಿಗೆ ಮಾರ್ಗದರ್ಶಕರಾಗಿ ಅದೆಷ್ಟೋ ನೊಂದ ಜೀವಿಗಳಿಗೆ ಅನಾಥ ಜೀವಿಗಳ ರಕ್ಷಣೆಯಾಗಿ ಸಂಸ್ಥೆ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎನ್ನಲಾಗಿದೆ.

ಭಗವಂತನ ಆದೇಶದಂತೆ ಅವರು ನಮ್ಮನ್ನು ಅಗಲಿದ್ದಾರೆ. ಆದರೆ ಅವರ ಸುಪುತ್ರರು ಅವರ ಮಾರ್ಗದಲ್ಲಿ ಅವರ ಆದರ್ಶದಂತೆ ಬಾಳಬೇಕು. ಕಾರುಣ್ಯ ಆಶ್ರಮದ ಖಜಾಂಚಿಗಳಾದ ಸಂಗನಗೌಡ ಕೆಂಪಲಿಂಗನಗೌಡ್ರು ಅವರ ಆತ್ಮಕ್ಕೆ ಶಾಂತಿ ದೊರಕಲಿ ಅವರ ಕುಟುಂಬಕ್ಕೆ ಅಗಲಿಕೆ ನೋವು ಭರಿಸುವಂತಹ ಶಕ್ತಿಯನ್ನು ಭಗವಂತ ಕರುಣಿಸಲಿ. ಈ ಕಾರುಣ್ಯ ಸಂಸ್ಥೆ ಸಮಾಜ ಸೇವಕ–ರಿಗೆ ಒಂದು ಪಾಠಶಾಲೆ ಇದ್ದಂತೆ ಇಲ್ಲಿ ಸೇವೆ ಮಾಡಿದ ಹಲವಾರು ಸೇವಕರು ಸಮಾಜಕ್ಕೆ ಮಾದ–ರಿಯಾಗಿದ್ದಾರೆ ಎಂದು ಆರ್ಶೀವಚನ ನೀಡಿದರು. ನಂತರ ಸಂಚಾರಿ ಪೊಲೀಸ್ ಠಾಣೆ ಶೋಭಾ ಮಾಲಿ ಪಾಟೀಲ್ ಮಾತನಾಡಿ, ನಮ್ಮ ಮಾವನವರಾದ ಸಂಗನಗೌಡ ಅವರು ನಮ್ಮೆಲ್ಲರಿಗೆ ಆದರ್ಶವಾಗಿದ್ದರು.

ಅವರ ಅಗಲಿಕೆಯ ನೋವು ನಮ್ಮನ್ನು ಸದಾವಕಾಲ ಕಾಡುತ್ತದೆ. ಹೆಚ್ಚು ವಿದ್ಯಾವಂತರಾಗಿ ನಮ್ಮೆಲ್ಲರಿಗೆ ಹಿರಿಯರಾಗಿ ಮಾರ್ಗದರ್ಶನ ನೀಡುತ್ತಿದ್ದನ್ನ ಮರೆಯುವಂತಿಲ್ಲ. ಇಂತಹ ವಿಶೇಷ ಸಂಸ್ಥೆಯಲ್ಲಿ ಅವರ ಆದರ್ಶ ವ್ಯಕ್ತಿತ್ವ ಮಾರ್ಗದರ್ಶನ ನಮ್ಮ ಕುಟುಂಬಕ್ಕೆ ಗೌರವ ತಂದು ಕೊಟ್ಟಿದೆ. ಅವರ ಅಗಲಿಕೆಯಿಂದ ತೆರವಾದಂತಹ ಖಜಾಂಚಿ ಸ್ಥಾನಕ್ಕೆ ಅವರ ಮಗನಾದ ಬಸವರಾಜ ಅವರನ್ನು ಆಯ್ಕೆ ಮಾಡಿರುವುದು ಇನ್ನು ಹೆಚ್ಚಿನ ಸಾಮಾಜಿಕ ಜವಾಬ್ದಾರಿ ನಿಭಾಯಿಸುವಂತಾಗಿದೆ. ಈ ಕಾರ್ಯಕ್ರಮದಲ್ಲಿ ವೇ.ಮೂ.ಅಮರಯ್ಯಸ್ವಾಮಿ ಹಿರೇಮಠ ಹರೇಟನೂರು ಸಂಸ್ಥಾಪಕರು ಕಾರುಣ್ಯ ಆಶ್ರಮ ಸಿಂಧನೂರು, ಶೋಭಾ ಪೊಲೀಸ್ ಇಲಾಖೆ ಸಿಂಧನೂರು ಗಂಗಮ್ಮ ದಿ.ಸಂಗನಗೌಡ ಬಸವರಾಜ ಕೆಂಪಲಿಂಗನಗೌಡ್ರು, ನಟರಾಜಗೌಡ ಕೆಂಪಲಿಂಗನ ಗೌಡ್ರು, ಚನ್ನಬಸವ ಕೆಂಪಲಿಂಗನಗೌಡ್ರು, ಅನ್ನಪೂರ್ಣ ಕೆಂಪಲಿಂಗನಗೌಡ್ರು, ಲೀಲಾ ಕೆಂಪಲಿಂಗನಗೌಡ್ರು, ಅಕ್ಷಯ್, ಪ್ರತೀಕ್, ಪಂಪನಗೌಡ ಭೀಮನಗೌಡ್ರು, ಆಶ್ರಮದ ಕಾರ್ಯಾಧ್ಯಕ್ಷ ಡಾ.ಚನ್ನಬಸವಸ್ವಾಮಿ ಹಿರೇಮಠ, ಸುಜಾತ ಹಿರೇಮಠ ಸದಸ್ಯರು, ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ, ಸಿದ್ದಯ್ಯಸ್ವಾಮಿ, ಮರಿಯಪ್ಪ, ಜ್ಯೋತಿ, ಮೀನಾಕ್ಷಿಮ್ಮ, ಲಕ್ಷ್ಮೀ, ಶರಣುಸ್ವಾಮಿ, ಬಸವಸ್ವಾಮಿ, ಹರೇಟನೂರಿನ ಕೆಂಪಲಿಂಗನಗೌಡ್ರು ಕುಟುಂಬಸ್ಥರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

ಕೋಲ್ ಇಂಡಿಯಾ ನೇಮಕಾತಿ 2026 – 34 ಇಂಟರ್ನ್‌ಗಳ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 27, 2026

ಕೋಲ್ ಇಂಡಿಯಾ ನೇಮಕಾತಿ 2026: 34 ಇಂಟರ್ನ್‌ಗಳ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕೋಲ್ ಇಂಡಿಯಾ ಲಿಮಿಟೆಡ್ ಕೋಲ್ ಇಂಡಿಯಾ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ರ ಮೂಲಕ ಇಂಟರ್ನ್‌ಗಳ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕೋಲ್ಕತ್ತಾ – ಪಶ್ಚಿಮ ಬಂಗಾಳ, ಟಿನ್ಸುಕಿಯಾ – ಅಸ್ಸಾಂ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಮೇ 16, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 27–04–2026

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16–ಮೇ–2026

ಅಧಿಕೃತ ವೆಬ್‌ಸೈಟ್: coalindia.inn

## ವಿದ್ಯಾರ್ಥಿಗಳಿಗೆ ಪ್ರೋತ್ಸಾಹವೇ ಮುಂದಿನ ವಿದ್ಯಾಭ್ಯಾಸಕ್ಕೆ ಪ್ರೇರಣೆ ಯಾಗುವುದು: ಭೀಮಸೇನಾಚಾರ್ಯ ನವಲಿ

ನೈಜ್ಯ ದೆಸೆ ನ್ಯೂಸ್

ವಿದ್ಯಾರ್ಥಿಯ ಜೀವನದಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯ ಫಲಿತಾಂಶಗಳು ಒಂದು ವಿಶೇಷ ಘಟ್ಟವಾಗಿದೆ. ಇದರಿಂದ ಮುಂದಿನ ವಿದ್ಯಾಭ್ಯಾಸ ಹಾಗು ಜೀವನದ ಗುರಿಯ ನಿರ್ಣಾಯಕವಾಗಿರುತ್ತದೆ. ಪ್ರತಿ ವಿದ್ಯಾರ್ಥಿಗಳಲ್ಲಿಯು ವಿಶೇಷ ಪ್ರತಿಭೆಗಳು ಇರುತ್ತವೆ. ಇದನ್ನು ಅರಿತು ಅವರನ್ನು ಪ್ರೋತ್ಸಾಹಿಸುವ ಮೂಲಕ ಮುಂದಿನ ಅಭ್ಯಾಸ ಪ್ರೇರಣೆಯಾಗುವುದು ಎಂದು ಸಿಂಧನೂರಿನ ವಶಿಷ್ಠಧಾಮ ಅಧ್ಯಕ್ಷರಾದ ಭೀಮಸೇನಾಚಾರ್ಯ ನವಲಿ ಹೇಳಿದರು.

ಅವರು ಜವಳಗೇರ ಗ್ರಾಮದ 49ನೇ ವರ್ಷದ ಶ್ರೀ ವಾಸವಿ ಜಯಂತಿಯ ಪ್ರಯುಕ್ತ ಎಸ್ ಎಸ್ ಎಲ್ ಸಿ ಹಾಗೂ ಪಿ.ಯು.ಸಿ ವಿದ್ಯಾರ್ಥಿಗಳಿಗೆ ವಶಿಷ್ಠಧಾಮ ಸಿಂಧನೂರು ಹಾಗೂ ಆರ್ಯವೈಶ್ಯ ಸಮಾಜ ಜವಳಗೇರ ಇವರ ಸಂಯುಕ್ತ ಆಶ್ರಯದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಆದರ್ಶ ಕುಟುಂಬ ಪ್ರಶಸ್ತಿ



ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು ಪ್ರತಿಭೆಗಳಿಗೆ ಪ್ರೋತ್ಸಾಹಿಸುವುದು ಸಮಾಜದ ಆದ್ಯ ಕರ್ತವ್ಯವಾಗಿದೆ ಇದರಿಂದ ಸಮಾಜ ಅಭಿವೃದ್ಧಿ ಹೊಂದಲಿದೆ ಎಂದರು. ವಾಸವಿ ಯುವಜನ ಸಂಘದ ಸಹ ಕಾರ್ಯದರ್ಶಿ ಎಂ ಸುರೇಶ ಶ್ರೇಷ್ಠಿ ಮಾತನಾಡಿ ನಮ್ಮ ನೆಚ್ಚಿನ ಗುರುಗಳಾದ ಭೀಮಸೇನಾಚಾರ್ಯ ನವಲಿ ಅವರು ಪ್ರತಿ ವರ್ಷವು ವಿದ್ಯಾರ್ಥಿಗಳಿಗೆ ವಾಸವಿ ಜಯಂತಿಯ ಪ್ರಯುಕ್ತ ಆಶೀರ್ವಾದ ಪೂರ್ವಕ ಅಭಿನಂದನಾ ಕಾರ್ಯಕ್ರಮ ಮಾಡುತ್ತಿರುವದು ಸಂತಸ ತಂದಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಪ್ರೇರಣೆಯಾಗುವುದು. ನಮ್ಮ ಸಮಾಜ ಮಾಡುವ ಕಾರ್ಯಕ್ರಮವನ್ನು ಗುರುಗಳು ಮಾಡುತ್ತಿರುವುದು ಅಭಿನಂದನೀಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಮಯದಲ್ಲಿ ವಿಜಯಲಕ್ಷ್ಮೀ ತಂದೆ ಬಸವರಾಜ, ವರ್ಷ ಸಿ ತಂದೆ ಮಂಜುನಾಥ ಸಿ, ಎಂ.ಆರ್ ಸಾಯಿ ಸಂಜನಾ ತಂದೆ ಎಂ.ಆರ್ ಪ್ರಕಾಶ್, ಸಾತ್ವಿಕ್ ಎಮ್.ಆರ್. ತಂದೆ ರಾಘವೇಂದ್ರ ಎಂ ಆರ್ ಹಾಗೂ ವೈಷ್ಣವಿ ತಂದೆ ಜಿ. ವೆಂಕಟಸತ್ಯನಾರಾಯಣ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ಪೇಟಾ ಹಾಗೂ ಹಾರಹಾಕುವ ಮೂಲಕ ಸನ್ಮಾನಿಸಲಾಯಿತು.

ನರಸಿಂಹ ಶ್ರೇಷ್ಠ ಕುಟುಂಬದವರಿಗೆ ಆದರ್ಶ ಕುಟುಂಬ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಎಂ. ದೊಡ್ಡಬಸವರಾಜ, ಚಂದ್ರ ಭೂಪಾಲ್ ನಾಡಗೌಡ, ಅಧ್ಯಕ್ಷ ಎಂ.ಆ ರಾಘವೇಂದ್ರ ಶ್ರೇಷ್ಠ, ಗೌರವ ಅಧ್ಯಕ್ಷ ಸಿ ಕೃಷ್ಣಯ್ಯ ಶ್ರೇಷ್ಠಿ, ಮುಖಂಡರಾದ ಎಂ. ಆ ಆಂಜನೇಯ ಶ್ರೇಷ್ಠ, ಎಂ.ಎಸ್ ವೆಂಕಯ್ಯಶ್ರೇಷ್ಠಿ, ಹುಡೇದ ವಿರೇಶ ಶ್ರೇಷ್ಠ, ಎಂ ರಾಘವೇಂದ್ರ ಶ್ರೇಷ್ಠ, ಎಂ ಪಾಂಡುರಂಗಶ್ರೇಷ್ಠಿ ಮುಂತಾದವರು ಉಪಸ್ಥಿತರಿದ್ದರು.

## ಮುದಗಲ್ಲ :ವಿಜೃಂಭಣೆಯ ವಾಸವಿ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

ಮುದಗಲ್ಲ : ಇಲ್ಲಿನ




ಆರ್ಯ ವೈಶ್ಯ ಸಮಾಜ ಹಾಗೂ ವಾಸವಿ ಮಹಿಳಾ ಸಂಘದ ಆಶ್ರಯದಲ್ಲಿ ರವಿವಾರ ವಾಸವಿ ಜಯಂತಿ ಯನ್ನು ವಿಜೃಂಭಣೆ ಯಿಂದ ಆಚರಿಸಲಾಯಿತು.

ಪಟ್ಟಣದ ನಾಗರೇಶ್ವರ ದೇವಸ್ಥಾನ ದಲ್ಲಿ ವಾಸವಿ ದೇವಿಗೆ ವಿವಿಧ ಧಾರ್ಮಿಕ ವಿಧಿ ವಿಧಾನಗಳು, ಹೋಮಹವನಗಳು, ಐಕ್ಯತಾ ಭವ್ಯ ಮೆರವಣಿಗೆ ನಡೆದ್ದಿದು, ಸಮಾಜದ ಬಾಂಧವರು ಸಮಾರಂಭದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದರು.

ದೇವಸ್ಥಾನದ ಆವರಣದಲ್ಲಿ ಗಂಗೆ ಪೂಜೆ ನಡೆಸಿ ಕನ್ನಿಕಾ ಪರಮೇಶ್ವರಿ ದೇವಿಯ ಭಾವಚಿತ್ರದ ಮೆರವಣಿಗೆ ನಾಗರೇಶ್ವರ ದೇವಸ್ಥಾನ ದಿಂದ ಪ್ರಮುಖ ರಸ್ತೆಯ ಬೀದಿ ಮೂಲಕ ನಗರೇಶ್ವರ ದೇವಸ್ಥಾನ ತಲುಪಿತು. ಮಹಿಳೆಯರು ಏಕವರ್ಣದ ಸೀರೆ ಯಲ್ಲಿ ಭಾಗವಹಿಸಿದ್ದರು.

ನಗರೇಶ್ವರ ದೇಗುಲದಲ್ಲಿ ಪೂಜೆ, ಅಭಿಷೇಕ,ಕುಂಕುಮಾಚರ್ನೆ,ಅಷ್ಟೋತ್ತರ ನಾಮಾವಳಿ, ತೊಟ್ಟಿಲು ಸೇವೆ, ಪ್ರಸಾದ, ಇತರೆ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾ ಭಕ್ತಿಯಿಂದ ನಡೆದವು. ಮುದಗಲ್ಲ ಪ್ರಮುಖ ರಸ್ತೆ ಮುಖಾಂತರ

ಸಕಲವಾಧ್ಯ ವೈಭವ, ಡಿಜೆ ಸಾಂಗ್ ಗೆಯುವಕರು ಡ್ಯಾನ್ಸ್ ಮಾಡುವುದು ಗಮನ ಸೆಳೆಯಿತು ಸಾರೋಟಿನ ಮೆರವಣಿಗೆ ನಡೆಯಿತು ಈ ಸಂದರ್ಭದಲ್ಲಿ ವಾಸವಿ ಜಯಂತಿಯ ಕಾರ್ಯಕ್ರಮದಲ್ಲಿ ಆರ್ಯ ವೈಶ್ಯ ಕುಲ ಬಾಂಧವರು ಭಾಗವಹಿಸಿದ್ದರು.




## ಹೊಸ ಕ್ರಾಂತಿಗೆ ಮುನ್ನುಡಿ ಬರೆಯದಿದ್ದರೆ ಅಹಿಂದ ದೂರ; ನಮ್ಮ ಸರ್ಕಾರದಲ್ಲೇ ಕೆಲವರು ಭರವಸೆ ಈಡೇರಿಸಲು ಬಿಟ್ಟಿಲ್ಲ: ಸತೀಶ್ ಜಾರಕಿಹೊಳಿ

ನೈಜ್ಯ ದೆಸೆ ನ್ಯೂಸ್

ಹುಬ್ಬಳ್ಳಿ: ಅಹಿಂದ ತಮ್ಮ ಪರವಾಗಿದೆ ಎಂದು ಕೆಲ ರಾಜಕಾರಣಿಗಳು ತಿಳಿದುಕೊಂಡಿದ್ದಾರೆ. ಆದರೆ, ಪರಿಸ್ಥಿತಿ ಅವರು ಅಂದುಕೊಂಡಂತಿಲ್ಲ. ಉಂಟಾಗಿರುವ ಸಮಸ್ಯೆಗೆ ಸೂಕ್ತ ಪರಿಹಾರ ನೀಡಿ ಗಟ್ಟಿಗೊಳಿಸಿ ಹೊಸ ಕ್ರಾಂತಿಗೆ ಮುನ್ನುಡಿ ಬರೆಯಬೇಕು. ಇಲ್ಲದಿದ್ದರೆ ಅಹಿಂದ ನಮ್ಮಿಂದ ದೂರವಾಗುತ್ತದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.ಭಾನುವಾರ ನಗರದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಅಹಿಂದ ಹೋರಾಟ ಸಾಧನೆ, ಸಂಕಲ್ಪ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಈ ಚಳವಳಿ ನಿರಂತರವಾಗಿ ಕ್ರಿಯಾಶೀಲವಾಗಿರಬೇಕು. 20 ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ನಡೆದ ಸಮಾವೇಶ ರಾಜಕೀಯ ಬದಲಾವಣೆಗೆ



ಕಾರಣವಾಯಿತು. ಈ ನೆನಪು ಮುಂದಿಟ್ಟುಕೊಂಡು ಏನೆಲ್ಲ ಬದಲಾವಣೆಯಾಗಿದೆ, ಏನೇನು ಆಗಬೇಕು ಎನ್ನುವುದನ್ನು ಚಿಂತಿಸಬೇಕು ಎಂದರು. ಅಹಿಂದ ಸಂಘಟನೆಯನ್ನು ರಾಜಕೀಯ ಲಾಭಕ್ಕಾಗಿ ಮಾಡುತ್ತಿಲ್ಲ, ಜನ ಜಾಗೃತಿಗಾಗಿ ಮಾಡಲಾಗುತ್ತಿದೆ. ಅಹಿಂದ ವರ್ಗವು ಸರಕಾರ ಮತ್ತು ಜನರ ಮಧ್ಯೆ ಸೇತುವೆಯಾಗಿ ಕಾರ್ಯ ನಿರ್ವಹಿಸಬೇಕಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಭವಿಷ್ಯದ ದಿನಮಾನಗಳಲ್ಲಿ ಏನೇನು ಆಗಬೇಕು ಎನ್ನುವುದನ್ನು ಚಿಂತಿಸಬೇಕು. ಇದು ನಾನು ಮುಖ್ಯಮಂತ್ರಿಯಾಗಬೇಕು, ಅಧಿಕಾರಿಯಾಗಬೇಕು ಎನ್ನುವ ರಾಜಕೀಯ ಕಾರ್ಯಾಗಾರವಲ್ಲ. ನಮ್ಮ ನ್ಯೂನತೆ, ತಪ್ಪುಗಳನ್ನು ಸರಿಪಡಿಸಿಕೊಂಡು ಹೋಗುವುದಕ್ಕಾಗಿ ಎಲ್ಲರ ಸಲಹೆ ಸೂಚನೆಗಾಗಿ ಈ ಕಾರ್ಯಾಗಾರ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇದ್ದರೂ ಅಹಿಂದ ವರ್ಗಕ್ಕೆ ಏನೂ ಮಾಡಿಲ್ಲ ಎನ್ನುವ ಟೀಕೆಗಳು ಕೇಳಿ ಬರುತ್ತಿವೆ. ಇಂತಹ ಪ್ರಶ್ನೆಗಳಿಗೆ ಉತ್ತರಿಸಲು ನಾವು ಸನ್ನದ್ಧರಾಗಬೇಕಿದೆ. ನಮ್ಮ ಸರ್ಕಾರದಲ್ಲೇ ಕೆಲವರು ಭರವಸೆ ಈಡೇರಿಸಲು ಬಿಟ್ಟಿಲ್ಲ. ಈ ಅವಧಿಯಲ್ಲಿ ಸಾಕಷ್ಟು ಕಲಿತಿದ್ದೇವೆ. ಹೋರಾಟದ ಸ್ವರೂಪ ಬದಲಿಸಿಕೊಳ್ಳಬೇಕಿದೆ. ರಾಜಕೀಯ, ಸಾಮಾಜಿಕ ನ್ಯಾಯದ ಬಗ್ಗೆ ತಿಳಿದುಕೊಳ್ಳಬೇಕು. ಸಾಕಷ್ಟು ಸಭೆ, ಸಮಾವೇಶ ನಡೆಸಿದರೂ ಬದಲಾವಣೆ ಸಾಧ್ಯವಾಗಿಲ್ಲ ಎಂದು ಜಾರಕಿಹೊಳಿ ವಿಷಾದ ವ್ಯಕ್ತಪಡಿಸಿದರು.

# ಕವಿತಾಳ–ವಾಸವಿ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

ಕವಿತಾಳ: ಪಟ್ಟಣದಲ್ಲಿ ಇಂದು ಆರ್ಯವೈಶ್ಯ ಸಮಾಜದ ವತಿಯಿಂದ ಶ್ರೀ ವಾಸವಿ ಜಯಂತಿಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಬೆಳಿಗ್ಗೆ ಶ್ರೀ ತ್ರಿಯಂಭಕೇಶ್ವರ ದೇವಸ್ಥಾನದಿಂದ ಕನ್ನಿಕಾಪರಮೇಶ್ವರಿ ದೇವಸ್ಥಾನದವರೆಗೆ ಅಮ್ಮನವರ ಮೂರ್ತಿ ಹಾಗೂ ಭಾವಚಿತ್ರವನ್ನು ಕಳಸ, ಕುಂಭದೊಂದಿಗೆ ಭಜನೆ ಮೂಲಕ ಮೆರವಣಿಗೆ ಮಾಡಲಾಯಿತು.

ಬ್ರಾಹ್ಮೀ ಮೂಹೂರ್ತದಲ್ಲಿ ದೇವಸ್ಥಾನದಲ್ಲಿರುವ ಅಮ್ಮನವರ ಉತ್ಸವ ಮೂರ್ತಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ತುಳಸಿ ಅರ್ಚನೆ, ವಿವಿಧ ಪುಷ್ಪಗಳಿಂದ ಅಲಂಕಾರ ಮಾಡುವ ಮುಲಕ ವಿವಿಧ



ಧಾರ್ಮಿಕ ವಿಧಿವಿಧಾನಗಳನ್ನು ಅರ್ಚಕರಾದ ಜಯತೀರ್ಥ ಆಚಾರ್ಯರು ನೆರವೇರಿಸಿದರು. ಪೂಜಾ ಕಾರ್ಯಕ್ರಮದ ನಂತರ ಭಕ್ತರಿಗೆ ಮಹಾಪ್ರಸಾದ ವಿತರಣೆ, ತೊಟ್ಟಿಲು ಸೇವೆ, ಸಂಜೆ ರಥೋತ್ಸವ ನೇರವೇರಿಸಲಾಗುವುದಾಗಿ ಆರ್ಯವೈಶ್ಯ ಸಮಾಜದ ಮುಖಂಡರು ತಿಳಿಸಿದರು.

ಪೂಜಾ ಕಾರ್ಯಕ್ರಮದಲ್ಲಿ ಹಣಗಿ, ಬಲ್ಲಟಗಿ ಸೇರಿದಂತೆ ಕವಿತಾಳದ ಆರ್ಯವೈಶ್ಯ ಸಮಾಜಭಾಂದವರು ಭಾಗವಹಿಸುವ ಮೂಲಕ ಅರ್ಥಪೂರ್ಣವಾಗಿ ಮಾತಾ ವಾಸವಿ ಜಯಂತಿಯನ್ನು ಆಚರಿಸಿದರು.

ಖಂಡನೆ: ರಾಯಚೂರಿನ ವಾಸವಿ ದೇವಸ್ಥಾನದಲ್ಲಿ ಜಯಂತಿ ಪ್ರಯುಕ್ತ ದೇವಸ್ಥಾನದ ಆವರಣದಲ್ಲಿ ಹಾಕಲಾಗಿದ್ದ ಬ್ಯಾನರ್‌ಗಳನ್ನು ಪಾಲಿಕೆಯವರು ಕಿತ್ತೆಸೆದಿರುವ ಘಟನೆ ಖಂಡನೀಯ ಇದು ನಮ್ಮ ಸಮಾಜದ ಗೌರವಕ್ಕೆ ದಕ್ಕೆ ತರುವಂತದ್ದಾಗಿದ್ದು ಬ್ಯಾನರ್‌ಗಳನ್ನು ತೆರವುಗೊಳಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕವಿತಾಳ ಆರ್ಯವೈಶ್ಯ ಸಮಾಜದ ವತಿಯಿಂದ ಒತ್ತಾಯಿಸಿದರು.

## ವಾಸವಿ ಜಯಂತಿಪ್ರಯುಕ್ತ ಹಾಕಲಾಗಿದ್ದ ಪೊಸ್ಟರ್ ತೆರವು ಪಾಲಿಕೆಯ ನಿಲುವಿಗೆ ಖಂಡನೆ



ನೈಜ್ಯ ದೆಸೆ ನ್ಯೂಸ್

ಕವಿತಾಳ: ಪಟ್ಟಣದ ಆರ್ಯವೈಶ್ಯ ಸಮಾಜದ ವತಿಯಿಂದು ನಿನ್ನೆ ರಾಯಚೂರಿನ ವಾಸವಿ ದೇವಸ್ಥಾನದ ಆವರಣದಲ್ಲಿ ಹಾಕಲಾಗಿದ್ದ ವಾಸವಿ ಜಯಂತಿಯ ಪೋಸ್ಟರ್‌ನ್ನು ಏಕಾಏಕಿ ದೌರ್ಜನ್ಯದಿಂದ ಕಿತ್ತಿಹಾಕಿರುವ ಮಹಾನಗರ ಪಾಲಿಕೆಯ ಸಿಬ್ಬಂದಿಗಳ ನಿಲುವನ್ನು ಖಂಡಿಸಿ ಪ್ರತಭಟಿಸಲಾಯಿತು.

ವಾಸವಿ ಜಯಂತಿಯ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಹಾಕಲಾಗಿದ್ದ ಸಮಾಜದ ಪೊಸ್ಟರ್‌ನ್ನು ಪಾಲಿಕೆ ಸಿಬ್ಬಂದಿಗಳು ಕಿತ್ತೆಸಿದರುವುದು ಖಂಡನೀಯ ನಮ್ಮ ಸಮಾಜವು ಯಾವುದೆ ಕಾನೂನುಗಳನ್ನು ಉಲ್ಲಂಘಿಸುವುದಾಗಲಿ ಕಾನೂನು ಭಾಹಿರ ಚಟುವಟಿಕೆಗಳನ್ನಾಗಲಿ ಮಾಡುವುದಿಲ್ಲ ಮತ್ತು ಯಾವಾಗಲೂ ನಮ್ಮ ನಾವುಗಳು ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಬಂದಿದ್ದೆವೆ ಆದರೇ ನಿನ್ನೆ ರಾಯಚೂರಿನಲ್ಲಿ ನಮ್ಮದೆ ಸ್ಥಳದಲ್ಲಿ ಹಾಕಲಾಗಿದ್ದ ಪೊಸ್ಟರನ್ನು ಕಿತ್ತೆಸೆಯುವ ಮೂಲಕ ನಮ್ಮ ಆರ್ಯವೈಶ್ಯ ಸಮಾಜಕ್ಕೆ.

ದಕ್ಕೆಯುಂಟಾಗಿದ್ದು ಇದಕ್ಕೆ ಕರಣರಾದ ಸಿಬ್ಬಂದಿಗಳ ಮೇಲೆ ಮೇಲಾಧಿಕಾರಿಗಳುಸೂಕ್ತ ಕ್ರಮ ಕೈಗೊಳ್ಳುವ ಮೂಲಕ ನಮ್ಮ ಸಮಾಜ ಭಾಂದವರಿಗೆ ಆದಂತ ನೋವಿಗೆ ನ್ಯಾಯ ಒದಗಿಸಬೇಕು ಎಂದು ಆರ್ಯವೈಶ್ಯ ಸಮಾಜದ ಮುಖಂಡರಾದ ಜನಾರ್ದನ್ ಕೋಸ್ಕಿ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಆರ್ಯವೈಶ್ಯ ಸಮಜ ಭಾಂದವರು ಇದ್ದರು.

## ದಸಾಪ ಹಾಗೂ ಕಸಾಪದಿಂದ ಏ.28ಕ್ಕೆ ಅಂಬೇಡ್ಕರ್, ಬಾಬು ಜಗಜೀವನ್ ರಾಮ್ ಜಯಂತಿ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ದಲಿತ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ದಲಿತ ಸಾಹಿತ್ಯ ಪರಿಷತ್ತು ಯುವ ಘಟಕದ ಸಹಯೋಗದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ್ ರಾಮ್ ಈ ಇಬ್ಬರ ಮಹನೀಯರ ಜಯಂತಿಯ ಅಂಗವಾಗಿ ಏ.28 ಮಂಗಳವಾರದಂದು ಸಂಜೆ 4:30ಕ್ಕೆ ನಗರದ ಸರ್ಕಾರಿ ನೌಕರರ ಭವನದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಡಾ.ಹುಸೇನಪ್ಪ ಅಮರಾಪುರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, "ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕನಸಿನ ಭಾರತ" ಎಂಬ ವಿಶೇಷ ಉಪನ್ಯಾಸವನ್ನು




ಮುಖಂಡರು ಹಾಗೂ ಪ್ರಗತಿಪರ ಚಿಂತಕರಾದ ಚಂದ್ರಶೇಖರ ಗೊರೇಬಾಳ, ಹಾಗೂ "ಡಾ.ಬಾಬು ಜಗಜೀವನ್ ರಾಮ್ ಅವರ ಜನಪರ ಯೋಜನೆಗಳು" ಎಂಬ ವಿಶೇಷ ಉಪನ್ಯಾಸವನ್ನು ವಿಶೇಷಾಧಿಕಾರಿ ಪ್ರೊ.ಪಿ.ಕಣ್ಣನ್ ಅಕ್ಕಮಹಾದೇವಿ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ಸಿಂಧನೂರು ಇವರಿಬ್ಬರ ಮಹನೀಯರ ಕುರಿತು ಉಪನ್ಯಾಸವನ್ನು ನೀಡಲಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷರಾದ ಎಚ್.ಎಫ್.ಮಸ್ಕಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ, ಡಾ.ಬಾಬು.ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಹಿರಿಯ ಮುಖಂಡರು ಹಾಗೂ ದಲಿತ ಹೋರಾಟಗಾರರಾದ ಆರ್.ಅಂಬ್ರೂಸ್ ಈ ಇಬ್ಬರು ಮಹನೀಯರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವರು. ಅಧ್ಯಕ್ಷತೆಯನ್ನು ದಸಾಪ ತಾಲೂಕು ಅಧ್ಯಕ್ಷ ಡಾ.ಹುಸೇನಪ್ಪ ಅಮರಾಪುರ ವಹಿಸಲಿದ್ದಾರೆ. ಗೌರವ ಉಪಸ್ಥಿತರಾಗಿ ಜಮಾಅತೆ ಇಸ್ಲಾಂ ಸಂಘಟನೆ ತಾಲೂಕು ಅಧ್ಯಕ್ಷ ಹುಸೇನ್ ಸಾಬ್, ದಸಾಪ ತಾಲೂಕು ಉಪಾಧ್ಯಕ್ಷ ಡಾ.ಅರುಣಕುಮಾರ ಬೇರ್ಗಿ,

ದಸಾಪ ತಾಲೂಕು ಘಟಕದ ಖಜಾಂಚಿ ಶರಣಪ್ಪ ಹೊಸಳ್ಳಿ, ತಾಲೂಕು ದಸಾಪದ ಗೌರವ ಸಲಹೆಗಾರರಾದ ಮಂಜುನಾಥ ಗಾಂಧಿನಗರ, ತಾಲೂಕು ದಸಾಪ ಕಾರ್ಯದರ್ಶಿ ರಾಮಣ್ಣ ಹಿರೇಭೇರ್ಗಿ, ಹನುಮಂತಪ್ಪ ಬೂದಿಹಾಳ ವಕೀಲರು, ತಾಲೂಕು ದಸಾಪ ಯುವ ಘಟಕದ ಅಧ್ಯಕ್ಷ ತಿಮ್ಮಪ್ಪ ಕಲ್ಮಂಗಿ, ಉಪಸ್ಥಿತರಾಗಿ ಇರಲಿದ್ದಾರೆ ಎಂದರು. ಕಸಾಪ ತಾಲೂಕು ಅಧ್ಯಕ್ಷ ಎಚ್.ಎಫ್.ಮಸ್ಕಿ ಮಾತನಾಡಿ, ಬಸವರಾಜ ಕಟ್ಟಿಮನಿ ಜಿಲ್ಲಾಧ್ಯಕ್ಷರು ಕರ್ನಾಟಕ ಪಂಚಾಯತ್ ರಾಜ್ಯ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ರಾಯಚೂರು, ರಾಜ್ಯ ಪರಿಷತ್ ಸದಸ್ಯ ಕೃಷ್ಣ ತಾವರಗೇರಾ ಕರ್ನಾಟಕ ಪಂಚಾಯತ್ ರಾಜ್ಯ ಅಭಿವೃದ್ಧಿ ಅಧಿಕಾರಿಗಳು,

ಹಾಗೂ ಕಲಬುರ್ಗಿ ವಿಭಾಗದ ಕರ್ನಾಟಕ ಪಂಚಾಯತ್ ರಾಜ್ಯ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಬಸವರಾಜ ಎನ್ ರೈತನಗರ ಕ್ಯಾಂಪ್ ಇವರಿಗೆ ಗೌರವ ಸನ್ಮಾನವನ್ನು ಹಮ್ಮಿಕೊಳ್ಳಲಾಗಿದೆ. ಪ್ರಾಸ್ತಾವಿಕವಾಗಿ ತಾಲೂಕು ಕಸಾಪ ಕಾರ್ಯಕಾರಿ ಮಂಡಳಿ ಸದಸ್ಯೆ ಶೋಭಾ ತೋರಗಲ್, ದಸಾಪ ಸಲಹೆಗಾರ ಈಶ್ವರಪ್ಪ ಹಲಗಿ ನಿರೂಪಣೆ ಮಾಡುವರು, ದಸಾಪ ಸಹ ಕಾರ್ಯದರ್ಶಿ ವೀರೇಶ ನಾಯಕ ಕನ್ನಾರಿ ಸ್ವಾಗತ ಮಾಡುವರು, ದಸಾಪ ಸದಸ್ಯ ಗಾಂಧಿನಗರದ ಶ್ರೀಕೃಷ್ಣ ವಂದನಾರ್ಪಣೆ ಮಾಡುವರು ಎಂದರು. ಇದೇ ವೇಳೆ: ದುರುಗಪ್ಪ ಗುಡುದೂರು, ಮಂಜುನಾಥ ಗಾಂಧಿನಗರ ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### B.Tech Environmental Engineering

B.Tech Environmental Engineering (ಪರಿಸರ ಎಂಜಿನಿಯರಿಂಗ್) ಎಂಬುದು 4 ವರ್ಷಗಳ (8 ಸೆಮಿಸ್ಟರ್) ಪದವಿ ಕೋರ್ಸ್ ಆಗಿದೆ. ಇದು ಪರಿಸರ ರಕ್ಷಣೆ, ತ್ಯಾಜ್ಯ ನಿರ್ವಹಣೆ, ಜಲ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಬಗ್ಗೆ ಕಲಿಸುತ್ತದೆ. 12ನೇ ತರಗತಿಯಲ್ಲಿ (PCM - Physics, Chemistry, Math) ತೇರ್ಗಡೆಯಾದವರು ಈ ಕೋರ್ಸ್ ಸೇರಬಹುದು. ಕರ್ನಾಟಕದಲ್ಲಿ NITK Surathkal ನಂತಹ ಸಂಸ್ಥೆಗಳು ಇದನ್ನು ಒದಗಿಸುತ್ತವೆ. ಕೋರಸ್ ವಿವರಗಳು (Course Details): ಕೋರ್ಸ್ ಅವಧಿ: 4 ವರ್ಷಗಳು (Full Time). ಅರ್ಹತೆ: 10+2 (ಕಗಅ) ನಲ್ಲಿ ವಿಜ್ಞಾನ ವಿಷಯ (Physics, Chemistry, Mathematics) ಕಡ್ಡಾಯ. ಪ್ರವೇಶ ಪರೀಕ್ಷೆಗಳು: ಎಇಇ Main, KCET. ಶುಲ್ಕ: ಅಂದಾಜು ₹3 ಲಕ್ಷದಿಂದ ₹12 ಲಕ್ಷದವರೆಗೆ (ಕಾಲೇಜಿನ ಮೇಲೆ ಅವಲಂಬಿತವಾಗಿದೆ). ಮುಖ್ಯಾಂಶಗಳು: ತ್ಯಾಜ್ಯ ನಿರ್ವಹಣೆ, ನೀರು ಮತ್ತು ಮಲಿನ ನೀರು ಸಂಸ್ಕರಣೆ, ವಾಯು ಮಾಲಿನ್ಯ ನಿಯಂತ್ರಣ. ಕೆಲಸದ ಅವಕಾಶಗಳು (Career Opportunities): ಪರಿಸರ ಸಮಾಲೋಚಕರು (Environmental Consultant) ತ್ಯಾಜ್ಯ ನಿರ್ವಹಣಾ ಅಧಿಕಾರಿ (Waste Management Officer) ಜಲ ಸಂಪನ್ಮೂಲ ಎಂಜಿನಿಯರ್ ಕರ್ನಾಟಕದ ಪ್ರಮುಖ ಕಾಲೇಜುಗಳು: National Institute of Technology Karnataka (NITK), ಸುರತ್ಕಲ್. SJCE (Sri Jayachamarajendra College of Engineering), ಮೈಸೂರು. UVCE (University Visvesvaraya College of Engineering), ಬೆಂಗಳೂರು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588, 9880707587, 9008787586

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.




# ಅವೈಜ್ಞಾನಿಕ ಒಳಮೀಸಲಾತಿ ನಿರ್ಧಾರ ಕೈಬಿಡಲು ಒತ್ತಾಯಿಸಿ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

ಲಿಂಗಸುಗೂರು: ಏ.27–ರಾಜ್ಯ ಸರ್ಕಾರ ಅವೈಜ್ಞಾನಿಕ ಒಳಮೀಸಲಾತಿ ನಿರ್ಧಾರ ಕೈಬಿಡಬೇಕೆಂದು ಒತ್ತಾಯಿಸಿ ಮೀಸಲಾತಿ ಸಂರಕ್ಷಣಾ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿದರು. ಪಟ್ಟಣದಬಸ್ ನಿಲ್ದಾಣ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಮಾನವ ಸರಪಣಿ ನಿರ್ಮಿಸಿದ್ದ–ರಿಂದ ಕೆಲಕಾಲವಾಹನಗಳ ಸಂಚಾರಕ್ಕೆ ಅಡಚಣೆಯಾಯಿತು.ವೃತ್ತದಲ್ಲಿಟೈಯರ್‌ಗೆ ಬೆಂಕಿ ಹಚ್ಚಲು ಮುಂದಾದ ವೇಳೆ ಪೊಲೀಸರು ಬೆಂಕಿ ಹಚ್ಚದಂತೆ ತಡೆದರು.ಪರಿಶಿಷ್ಟ ಸಮುದಾಯವನ್ನು ಎಡಗೈ,ಬಲಗೈ ಮತ್ತು ಇತರೆ ಎಂಬ ಮೂರು ಗುಂಪುಗಳಾಗಿಮರುವರ್ಗೀಕರಣ ಮಾಡಲಾಗಿದ್ದು, ಪರಿಶಿಷ್ಟ ಜಾತಿಯ 101 ಜಾತಿಗಳಿಗೆ ಶೇ 15 ರ ಒಳಮೀಸಲಾತಿ ಜಾರಿಗೆ ಸರ್ಕಾರ ಕೆಲವೇ ಕೆಲ ವ್ಯಕ್ತಿಗಳ ಒತ್ತಡಕ್ಕೆ ಮಣಿದು ಮೀಸಲಾತಿ ವರ್ಗೀಕರಿಸಿ ಹಂಚಿಕೆ ಮಾಡಲು ನಿರ್ಧಾರಕೈಗೊಂಡಿದೆ. ಸಂಪುಟ ಸಭೆಯಲ್ಲಿ ನಿರ್ಧಾರದಂತೆ ಎಡಗೈ ಸಮುದಾಯಕ್ಕೆ ಶೇ 5.25 ಮತ್ತು ಬಲಗೈ ಸಮುದಾಯಕ್ಕೆ ಶೇ 5.25 ಹಾಗೂ ಇತರೆ ಸಮುದಾಯಗಳಿಗೆ ಶೇ 4.5 ಮೀಸಲಾತಿ ಹಂಚಿಕೆ ಮಾಡಿ ಒಳಮೀಸಲಾತಿ ನೀಡಲು ಸರ್ಕಾರತೀರ್ಮಾನಿಸಲಾಗಿದೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಕು–ರಿತು ಪರಿಪೂರ್ಣ ಮಾಹಿತಿ ಇಲ್ಲದ್ದರಿಂದ ಒಳಮೀಸಲಾತಿ ಜಾರಿ ಮಾಡದಂತೆ ಪ್ರವರ್ಗ ಸಿ ಸಮುದಾಯದಲ್ಲಿ ಗುರುತಿಸಿಕೊಂಡಿರುವ 63ಜಾತಿಗಳ ಒಕ್ಕೂಟ ವೇದಿಕೆಯಿಂದ ತೀವ್ರ ಪ್ರತಿಭಟನೆ ಮಾಡಿದ್ದರೂ ಸಹ ಸರ್ಕಾರ ಜಾಣ ಕಿವುಡನಂತೆ ಈ ನಿರ್ಧಾರ ಕೈಗೊಂಡಿರುವುದು ಪ್ರವರ್ಗ ಸಿ ಸಮುದಾಯಗಳಿಗೆ ಮರಣ ಶಾಸನವಾಗಿದೆ. ಕೇಂದ್ರಸರ್ಕಾರ ನಡೆಸುತ್ತಿರುವ ಜನಗಣತಿಯ 'ಮಾಹಿತಿ ವರ್ತಿಸಿ ಸಂಪೂರ್ಣ ಲಭ್ಯವಾಗುವವರೆಗೆ ಒಳಮೀಸಲಾತಿ ಜಾರಿಗೊಳಿಸಬಾರದು.ಪ–ರಿಶಿಷ್ಟಜಾತಿಗಳ ಒಳಮೀಸಲಾತಿ ವಿಚಾರದಲ್ಲಿ ಸರ್ಕಾರಕೈಗೊಂಡಿರುವ ಕ್ರಮಗಳಿಂದ ಭೋವಿ,ಬಂಜಾರ. ಕೊರವ, ಕೊರಮ, ಕೊರಚ, ಸೂಕ್ಷ್ಮ, ಅತಿಸೂಕ್ಷ್ಮ ಹಾಗೂ ಅಲೆಮಾರಿಗಳ 59 ಜಾತಿಗಳಿಗೆ ಅನ್ಯಾಯವಾಗಲಿದೆ. ಅಲೆಮಾರಿ ಸಮುದಾಯಗಳು ಇಂದಿಗೂ ಗುಡಿಸಲುಗಳಲ್ಲಿ ವಾಸಿಸುತ್ತ ತುತ್ತು ಅನ್ನಕ್ಕೂ ಪರದಾಡುತ್ತಿವೆ. ರಾಜ್ಯ ಸರ್ಕಾರ ಅವೈಜ್ಞಾನಿಕ ಒಳಮೀಸಲಾತಿ ನಿರ್ಧಾರ ಕೈಬಿಡದಿದ್ದರೆ ಮುಂದಿನದಿನಗಳಲ್ಲಿ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಮನವಿಯಲ್ಲಿ ಎಚ್ಚರಿಕೆ ನೀಡಿದ್ದಾರೆ.ಪ್ರತಿಭಟನೆಯಲ್ಲಿ ಒಕ್ಕೂಟದ ಮುಖಂಡರಾದ ಜೀವಲೆಪ್ಪನಾಯ್ಕ,ನಾರಾಯಣಪ್ಪ ನಾಯ್ಕ, ಭೀಮಣ್ಣ ಹಿರೇಮನಿ, ಶರಣಪ್ಪ ಜಾಧವ್, ರಾಜು ಜಾಧವ್, ನೀಲಪ್ಪ ಪವಾರ, ದೇವಪ್ಪ ರಾಠೋಡ್. ದೇವರಡ್ಡಿ ಭೋವಿ, ಸತ್ಯಪ್ಪ ಭೋವಿ, ಅಮರೇಶ, ರಮೇಶ ಭೋವಿ, ರಮೇಶ ಕರಡಕಲ್ ಸೇರಿದಂತೆ ಇತರರು ಇದ್ದರು.

# ರಾಷ್ಟ್ರೀಯ MRME ಐಡಿಯಾ ಹ್ಯಾಕಥಾನ್‌ನಲ್ಲಿ ಶರಣಬಸವ ವಿವಿಯ ಬಿ.ಟೆಕ್ ಅಂತಿಮ ವರ್ಷದ ವಿದ್ಯಾರ್ಥಿನಿಯ ಅಪರೂಪದ ಸಾಧನೆ

ನೈಜ್ಯ ದೆಸೆ ನ್ಯೂಸ್

ಕಲಬುರಗಿ;ಏ.27: ಪರಿಸರ ಸಮಸ್ಯೆಗಳು ಸೇರಿದಂತೆ ವಿಕಸನಗೊಳ್ಳುತ್ತಿರುವ ಸಮಸ್ಯೆಗಳಿಗೆ ನೈಜ–ಸಮಯದಪ–ರಿಹಾರಗಳನ್ನು ಕಂಡುಹಿಡಿಯಲು ವಿದ್ಯಾರ್ಥಿಗಳಲ್ಲಿ ನಾವೀನ್ಯತೆ ಮತ್ತು ಸಂಶೋಧನಾ ಚಟುವಟಿಕೆಗಳನ್ನು ಉತ್ತೇಜಿಸಲು ಕೇಂದ್ರಸರ್ಕಾರವು ಆಯೋಜಿಸಿರುವ ಒಖಒಇ ನ್ಯಾಷನಲ್ ಐಡಿಯಾ ಹ್ಯಾಕಥಾನ್ 5.0ನಲ್ಲಿಭಾಗವಹಿಸಿದ ಶರಣಬಸವ ವಿಶ್ವವಿದ್ಯಾಲಯದ ಅಂತಿಮ ವರ್ಷದಬಿ.ಟೆಕ್ ವಿದ್ಯಾರ್ಥಿನಿ ನಿಶಾ ಕೆ.ಎಸ್, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೃಷಿ ಕಾರ್ಬನ್ ಉತ್ಪಾದನೆ ಮತ್ತು ಕೈಗಾರಿಕೆಗಳು ಉತ್ಪಾದಿಸುವ ಹಾನಿಕಾರಕ ಇಂಗಾಲವನ್ನು ತಟಸ್ಥಗೊಳಿಸಲು ಹಾಗೂಅದರ ಬಳಕೆಗಳ ಕುರಿತು ತನ್ನ ನವೀನ ಯೋಜನೆಯನ್ನು ಸಂಶೋಧಿಸಿದ ಏಕೈಕ ವಿದ್ಯಾರ್ಥಿನಿ ಎಂಬ ಅಪರೂಪದ ಗೌರವಕ್ಕೆ ಪಾತ್ರರಾಗಿದ್ದಾರೆ. ಎಲೆಕ್ಟ್ರಾನಿಕ್ಸ್ ಆಯಂಡ್ ಕಮ್ಯೂನಿಕೇಷನ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕಿ ಡಾ.ಬಸಂತಿ ಘಂಟಿ ಅವರಿಂದ ಪರಿಣಾಮಕಾರಿಯಾಗಿ ಮಾರ್ಗದರ್ಶನ ಪಡೆದ ಮತ್ತು ಶರಣಬಸವ ವಿಶ್ವವಿದ್ಯಾಲಯದ ಬ್ಯುಜಿನೆಸ್ ಇನ್ಕ್ಯುಬೇಷನ್‌ಸೆಂಟರ್‌ನ ತಂಡದ ಸದಸ್ಯರಾದ ಡಾ. ಅನುರಾಧಾ ಪಾಟೀಲ್ ಮತ್ತು ಪ್ರೊ. ಲಕ್ಷ್ಮಿ ಪಾಟೀಲ್ ಅವರ ಉತ್ತಮ ಪ್ರೇರಣೆಯೊಂದಿಗೆ, ವಿದ್ಯಾರ್ಥಿನಿ ನಿಶಾ ಕೆ.ಎಸ್. ಹ್ಯಾಕಥಾನ್‌ನಲ್ಲಿ ತನ್ನ ನವೀನ ಯೋಜನೆಗಾಗಿ 14 ಲಕ್ಷ ರೂ. ಗಳ ಆರ್ಥಿಕ ಸಹಾಯವನ್ನು ಪಡೆಯುವಲ್ಲಿ ಯಶಸ್ವಿಯಾದರು. ಇದರಲ್ಲಿ ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲಾಗುತ್ತಿದ್ದು, ಗರಿಷ್ಠ 15ಲಕ್ಷ ರೂ.ಗಳ ಸಹಾಯ





ಧನವನ್ನು ನಿಗದಿಪಡಿಸಲಾಗಿದೆ.ವಿವಿಯಲ್ಲಿರುವ ಇನ್ಕ್ಯುಬೇಷನ್ ಸೆಂಟರ್ ಹಾಗೂ ವಿದ್ಯಾರ್ಥಿ ತಂಡವು ಸ್ವೀಕರಿಸಿದ ಸಂವಹನದ ಪ್ರಕಾರ, ಹಣಕಾಸು ಸಹಾಯಕ್ಕಾಗಿ ಆಯ್ಕೆಯಾದ ಒಟ್ಟು 502 ಯೋಜನೆಗಳಲ್ಲಿ ಶರಣಬಸವ ವಿವಿಯ ವಿದ್ಯಾರ್ಥಿನಿಯಾದ ನಿಶಾ ಕೂಡ ಒಬ್ಬರು. ಐಐಟಿಗಳು, ಎನ್‌ಐಟಿಗಳು, ಐಐಎಸ್ಸಿಗಳು, ಕೇಂದ್ರಿಯ ವಿಶ್ವವಿದ್ಯಾಲಯಗಳು, ರಾಜ್ಯ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಸೇರಿದಂತೆ ದೇಶದ ಇತರ ಪ್ರಮುಖ ಸಂಸ್ಥೆಗಳಿಂದ ಯೋಜನೆಗಳನ್ನು ಅನುಮೋದನೆಗಾಗಿಸಲ್ಲಿಸಲಾಗಿ–ತ್ತು. ಸರ್ಕಾರವು ತಲಾ 15 ಲಕ್ಷ ರೂ.ಗಳಗರಿಷ್ಠನೆರವು ನೀಡಲು ಒಟ್ಟು 502 ಯೋಜನೆಗಳನ್ನು ಆಯ್ಕೆ ಮಾಡಿ. ಕೆಲವೇ ಯೋಜನೆಗಳಿಗೆ ಮಾತ್ರ 14 ಲಕ್ಷ ರೂ. ಮತ್ತು ಅದಕ್ಕಿಂತ ಹೆಚ್ಚಿನ ಆರ್ಥಿಕ ನೆರವು ನೀಡಲಾಗಿದೆ.ವಿದ್ಯಾರ್ಥಿನಿ ನಿಶಾ ವಿನ್ಯಾಸಗೊಳಿಸಿದ ನವೀನ ಯೋಜನೆಯು, ಕೈಗಾರಿಕೆಗಳ ವ್ಯಾಪ್ತಿಯೊಳಗಿನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಕೃಷಿ ಕ್ಷೇತ್ರಗಳಲ್ಲಿ ಕೈಗಾರಿಕೆಗಳು ಉತ್ಪಾದಿಸುವ ಇಂಗಾಲದ ಹೀರಿಕೊಳ್ಳುವಿಕೆಯನ್ನು ಅಳೆಯಲು ಮತ್ತು ಪರಿಸರಕ್ಕೆ ಹಾನಿಯಾಗದಂತೆ ಇಂಗಾಲವನ್ನು ಹೀರಿಕೊಳ್ಳುವಿಕೆಗಾಗಿಕೈಗಾ–ರಿಕೆಗಳಿಗೆ ಶುಲ್ಕವಿಧಿಸಲು ಅವಕಾಶಗಳನ್ನು ಒದಗಿಸುತ್ತದೆ. ಈ ಯೋಜನೆಯು ಅಗ್ರಿಕಾರ್ಬನ್ ಆಧರಿಸಿದೆ, ಕೃತಕ ಬುದ್ಧಿಮತ್ತೆ ಮಾದರಿಗಳು, ಉಪಗ್ರಹ ಚಿತ್ರಣ, ಡ್ರೋನ್ ಆಧಾರಿತ ರಿಮೋಟ್ ಸೆನ್ಸಿಂಗ್, ಐಒಟಿ ಸಂವೇದಕಗಳು ಮತ್ತು ಬ್ಲಾಕ್ ಚೈನ್ ವ್ಯವಸ್ಥೆಗಳು ಸೇರಿದಂತೆ ಅಸ್ತಿತ್ವದಲ್ಲಿರುವ ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತದೆ.ಡಾ.ಘಂಟಿಯವರ ಪ್ರಕಾರ, ಈ ನಾವೀನ್ಯತೆಯು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಹಾಗೂ ಕೃಷಿ ಅರಣ್ಯ ರೈತರಿಗೆ ಇಂಗಾಲದ ಪ್ರತ್ಯೇಕತೆಯನ್ನು ಪ್ರಮಾಣೀಕರಿಸಲು ಮತ್ತು ಅದನ್ನು ವ್ಯಾಪಾರ ಮಾಡಬಹುದಾದ ಇಂಗಾಲವನ್ನು ಪರಿವರ್ತಿಸಲು ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾದ, ಏಕೀಕರಣ ಚೌಕಟ್ಟು ಮತ್ತು ಎಐ ಕ್ರಮಾವಳಿಗಳಲ್ಲಿದೆ. ಪ್ಲಾಟ್ ಫಾರ್ಮ್ ಮತ್ತು ಸಂಖ್ಯೆಯ ಇಂಗಾಲದ ಅಂದಾಜು ಕ್ರಮಾವಳಿಗಳು, ಡಿಜಿಟಲ್ ಪ್ರಮಾಣೀಕರಣ ವ್ಯವಸ್ಥೆ ಮತ್ತು ಮಾರುಕಟ್ಟೆ ಏಕೀಕರಣವು ಆಂತರಿಕವಾಗಿ ಅಭಿವೃದ್ಧಿಪಡಿಸಲಾಗಿದೆ. ಪ್ರಸ್ತಾವಿತ ಯೋಜನೆಯು ಮೂರನೇ ವ್ಯಕ್ತಿಯ ಐಪಿಯನ್ನು ಉಲ್ಲಂಘಿಸುವುದಿಲ್ಲ.ಸಣ್ಣ ರೈತರು ಇಂಗಾಲದ ಮಾರುಕಟ್ಟೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅನುವು ಮಾಡಿಕೊಡುವ ಹಾಗೂ ಕಡಿಮೆ–ಇಂಗಾಲದ ಕೃಷಿಗಾಗಿ ವಿಶಿಷ್ಟವಾದ, ಸ್ಕೈಲೆಬಲ್ ಪರಿಹಾರವನ್ನು ರಚಿಸಲು ಯೋಜನೆಯು ಪ್ರಸ್ತಾಪಿಸುತ್ತದೆ ಎಂದು ತಿಳಿಸಿದರು. ಎಐ ಚಾಲಿತ ಮೇಲ್ವಿಚಾರಣಾ ಡೇಟಾವನ್ನು ಬಳಸಿಕೊಂಡು ಇಂಗಾಲವನ್ನು ಉತ್ಪಾದಿಸಲು, ಪರಿಶೀಲಿಸಲು ಮತ್ತು ವ್ಯಾಪಾರ ಮಾಡಲುವೈಯಕ್ತಿಕವಾಗಿ ರೈತರಿಗೆ ಅಪ್ಲಿಕೇಶನ್ ಮೂಲಕಒದಗಿಸಲಾದ ಈ ಪ್ಲಾಟ್ ಫಾರ್ಮ್ ಯೋಜನೆಯ ವಿಶಿಷ್ಟತೆಯಾಗಿದೆ ಎಂದು ಡಾ. ಘಂಟಿ ಹೇಳಿದರು.ಅಪ್ಲಿಕೇಶನ್ ಪ್ರತಿ ಎಕರೆಗೆ ನಿಜವಾದ ಸಮಯದಲ್ಲಿ ಗಳಿಸಿದ ಕಾರ್ಬನ್ ಕ್ರೆಡಿಟ್ ಗಳನ್ನು ಒದಗಿಸುತ್ತದೆ, ಪತ್ತೆಹಚ್ಚಬಹುದಾದ ಟ್ಯಾಂಪರ್ ಪ್ರೂಫ್ ಕಾರ್ಬನ್ ಕ್ರೆಡಿಟ್ ಲಾಗ್‌ಗಳನ್ನು ಮತ್ತು ಇತರ ಪ್ರಯೋಜನಗಳನ್ನು ಸೃಷ್ಟಿಸುತ್ತದೆ ಎಂದರು. ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಪೂಜ್ಯದೊಡ್ಡಪ್ಪ ಅಪ್ಪ ಮತ್ತು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂಶರಣಬಸವವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅಪ್ಪಾಜಿಯವರು ಶರಣಬಸವ ವಿವಿಯ ವಿದ್ಯಾರ್ಥಿನಿಯಾದ ನಿಶಾ ಕೆ ಎಸ್ ಅವರ ಅಪ್ರತಿಮ ಸಾಧನೆಗೆ ಅಭಿನಂದನೆ ಸಲ್ಲಿಸಿ ಆಶೀರ್ವಾದಿಸಿದ್ದಾರೆ. ಈ ಗೌರವವನ್ನು ಸಾಧಿಸಲು ವಿದ್ಯಾರ್ಥಿನಿಗೆ ಮಾರ್ಗದರ್ಶನ ನೀಡಿದ ಮಾರ್ಗದರ್ಶಕ ತಂಡವನ್ನು ಶ್ಲಾಘಿ–ಸಿದ್ದಾರೆ.ಸಂಘದ ಕಾರ್ಯದರ್ಶಿ ಶ್ರೀ ಬಸವರಾಜ ದೇಶಮುಖ, ವಿವಿಯ ಉಪಕುಲಪತಿ ಪ್ರೊ. ಅನಿಲಕುಮಾರಬಿಡವೆ, ಕುಲಸಚಿವ ಡಾ. ಲಕ್ಷ್ಮಿ ಪಾಟೀಲ್ ಮಾಕಾ, ಕುಲಸಚಿವ (ಮೌಲ್ಯಮಾಪನ) ಡಾ. ಎಸ್. ಎಚ್. ಹೊನ್ನಳ್ಳಿ, ಡೀನ್ ಡಾ.ಶಿವಕುಮಾರಜವಳಿಗಿ ಮತ್ತು ಹಣಕಾಸು ಅಧಿಕಾರಿ ಡಾ.ಕಿರಣ್ ಮಾಕಾ ಅವರು ವಿದ್ಯಾರ್ಥಿನಿ ಮತ್ತು ಅವರ ಮಾರ್ಗದರ್ಶಕರ ಈ ಶ್ಲಾಘನೀಯ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ.

# ಮಾದಿಗ, ಅಲೆಮಾರಿ ಸಮುದಾಯಗಳಿಗೆ ಒಳಮೀಸಲಾತಿಯಲ್ಲಿ ಮರಣ ಶಾಸನ ಬರೆದ ಕಾಂಗ್ರೆಸ್

ನೈಜ್ಯ ದೆಸೆ ನ್ಯೂಸ್

ರಾಯಚೂರು, ದಿ..24ರಂದು ನಡೆದ ಸಚಿವ ಸಂಪುಟ ತಿರ್ಮಾನ ಮಾದಿಗ ಮತ್ತು ಅಲೆಮಾರಿ ಸಮುದಾಯಗಳಿಗೆ ಒಳಮೀಸಲಾತಿಯಲ್ಲಿ –ಮರಣ ಶಾಸನ ಬರೆದು ರೋಸ್ಟರ್ ಬಿಂದ್ ನಲ್ಲಿ ಬಹದುದೊಡ್ಡ ಮೋಸವನ್ನು ರಾಜ್ಯ ಕಾಂಗ್ರೆಸ್ ಸರಕಾರ ಮಾಡಿದೆ ಎಂದು ಮಾದಿಗ ದಂಡೋರ (ಎಂ ಆರ್ ಪಿ ಎಸ್) ಮಾದಿಗ ಮೀಸಲಾತಿ ಹೋರಾಟ ಕರ್ನಾಟಕ ರಾಜ್ಯ ಸಮಿತಿ ರಾಜ್ಯ ಅಧ್ಯಕ್ಷರಾದ ಬಿ.ನರಸಪ್ಪದಂಡೋರ ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಸತನಾಡಿ,ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಸಂವಿಧಾನಾತ್ಮಕವಾಗಿ ಹಕ್ಕುನೀಡಿದ ಸರ್ವೋಚ್ಚನ್ಯಾಯಲಯ ತೀರ್ಪನ್ನು ತಿರಸ್ಕರಿಸಿ ಬಲಾಢ್ಯ ಬಲಗೈ ಸಚಿವರ ಕೈಗೊಂಬೆಗಳಾಗಿ ಮಾದಿಗ ಮತ್ತು ಅಲೆಮಾರಿ ಸಮುದಾಯಗಳಿಗೆ ಒಳಮೀಸಲಾತಿಯಲ್ಲಿ ಬಹುದೊಡ್ಡ ಮೋಸ ಮಾಡಿ ಮಾದಿಗರನ್ನು ತುಳಿಯುವಂತ ಕೆಲಸಕಾಂಗ್ರೆಸ್‌ರದ ಮುಖ್ಯಮಂತ್ರಿ ಸಿದ್ದರಸಮಯ್ಯ ಮಾಡಿ. ತಮ್ಮ ಕುರ್ಚಿನ್ನು ಉಳಿಸಿಕೊಳ್ಳುವಗೋಸ್ಕರನೇ ಮಾದಿಗರಿಗೆ



ಮರಣಶಾಸನವನ್ನು ಬರೆದಿದ್ದಾರೆಂದರು..ಸುಮಾರು 35 ವರ್ಷಗಳಿಂದ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬರುವಂತ 101 ಜಾತಿಗಳಿಗೆ ಸಾಮಾಜಿಕ, ಆರ್ಥಿಕ, ಶಿಕ್ಷಣ, ಉದ್ಯೋಗ, ಕ್ಷೇತ್ರದಲ್ಲಿ ನ್ಯಾಯುತವಾದ ಸಾಮಾಜಿಕ ನ್ಯಾಯ ಸಿಗಲಿ ಎಂದು. ಅಂಬೇಡ್ಕರ್ ರವರ ಕನಸು ಆಗಿತ್ತು. ಅಂಬೇಡ್ಕರ್ ರವರ ಕನಸನ್ನು ನನಸು ಮಾಡಲು ಈ ವೇಶದಲಿ ಪದ್ಮಶ್ರೀ ಮಂದಕ್ಷ ಮಾದಿಗರವರು 1994ರ ದಶಕದಲ್ಲಿ ಉದ್ಭವಗೊಂಡ ಉದ್ಭವಗೊಂಡಮಾದಿಗದಂಡೆ ಮಾದಿಗ ದಂಡೋರ ಒಖಕಖ ಹೋರಾಟ ಸಮಿತಿಯ ನಾಯಕತ್ವದಲ್ಲಿ ಆಂಧ್ರಪ್ರದೇಶ ಮತ್ತು ತೆಲಂಗಾಣ ಹಾಗೂ ದೇಶಾದ್ಯಂತ ಒಳಮೀಸಲಾತಿ ಹೋರಾಟಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ 1997 ರಿಂದ ವಿಭಿನ್ನ ರೀತಿಯ ಹೋರಾಟಗಳುಮೀಸಲಾತಿಯಲ್ಲಿ ಮರಣ ಶಾಸನ ಬರೆದ ಕಾಂಗ್ರೆಸ್ ಪ್ರಾರಂಭಗೊಂಡವು. ಈ ಹೋರಾಟಗಳನ್ನು ಮನಗೊಂಡ ಸರ್ವೋಚ್ಚ ನ್ಯಾಯಲಯವು 2024 ಆಗಸ್ಟ್–01 ರಂದು ಮಾನ್ಯ ಸರ್ವೋಚ್ಚ ನ್ಯಾಯಲಯವು (Supreme court) ಅಂಗಲದಲ್ಲಿ ಬೀಡುಬಿಟ್ಟದ ಸಾಮಾಜಿಕ ನ್ಯಾಯ ಒಳ ಮೀಸಲಾತಿಯನ್ನು ಆಯಾ ರಾಜ್ಯ ಸರಕಾರಗಳು ಪರಿಶಿಷ್ಟ ಜಾತಿಯಲ್ಲಿ ಬರುವಂತ ಸಮುದಾಯಗಳ ಸ್ಥಿತಿಗತಿಗಳನ್ನು ಅಧ್ಯಾಯನ ಮಾಡಿ ಶೇಖರಿಸಿ ಒಳಮೀಸಲಾತಿಯನ್ನು ಕಲ್ಪಿಸಬಹುದು ಎಂದು ಮಾನ್ಯ ಸರ್ವೋಚ್ಚ ನ್ಯಾಯಲವು ಮಹಾತ್ಮದ ತೀರ್ಪನ್ನು ನೀಡಿತು.ಸರಕಾರದಲಿ ಈಗಾಗಲೇ ಸದಾಶಿವ ಆಯೋಗ ವರದಿ, ಮಾಧುಸ್ವಾಮಿ ಆಯೋಗ ವರದಿ, ಹೆಚ್. ಎನ್. ನಿವೃತ್ತ ನ್ಯಾಯಮುರ್ತಿಗಳಾದ ನಾಗಮೋಹನ ದಾಸ್ ಆಯೋಗ ವರದಿಗಳು ಸರಕಾರದ ವ್ಯಾಪ್ತಿಯಲ್ಲಿ ಬರುವಂತೆ ಸಮಾಜ ಕಲ್ಯಾಣ ಇಲಾಖೆ ಅನುದಾನದಿಂದ ನೂರಾರು ಕೋಟಿಗಳು ಖರ್ಚು ಮಾಡಿ ರಾಜ್ಯಾದಂತ ಸಮೀಕ್ಷೆ ನಡೆಸಿ ದತ್ತಾಂಶವನ್ನು ಸರಕಾರ ಸಂಗ್ರಹಿಸಲಾಗಿತ್ತು. ಮೂರು ವರದಿಗಳಲ್ಲಿ ಮಾದಿಗ ಮತ್ತು ಮಾದಿಗ ಉಪಜಾತಿಗಳು ಜನಸಂಖ್ಯೆ ಅನುಗುಣವಾಗಿ ಶೇಕಡ 6% ರಷ್ಟು ಮೀಸಲಾತಿಯನ್ನು ನಿಗದಿ ಪಡಿಸಲಾಗಿತ್ತು.ಆದರೆ ಆಳುವಂತ ಕಾಂಗ್ರೆಸ್ ಸರಕಾರ ದಿನಾಂಕ:24–04–2026 ರಂದು ವಿಶೇಷ ಸಚಿವ ಸಂಪುಟದಲ್ಲಿ ಮೂರು ವರದಿಗಳನ್ನು ಕಸದ ಬುಟಿ–ಗೆ ಎಸಗಿದೆ. ತಮ್ಮ ಸ್ವಾರ್ತಕ್ಕಾಗಿ ಮತ್ತು ಸಮಾಜವನ್ನು ಬಲಿಕೊಟ್ಟಿರುವ ಕಾಂಗ್ರೆಸ್ ಸರಕಾರ ಸಾಮಾಜಿಕ ನ್ಯಾಯ ಕೊಡುವಲ್ಲಿ ಸಂಪೂರ್ಣ ವಿಫಲಾಗೊಂಡಿದೆ.ಮತ್ತು ಒಳಮೀಸಲಾತಿಯನ್ನು ಕಾನೂನು ಕಾಯ್ದೆ ಅಡಿಯಲ್ಲಿ ಜಾರಿಗೆ ತರುವ ತಮ್ಮ ಪ್ರಣಾಳಿಕೆಯಲ್ಲಿ ಘೋಷಣೆಯಾಗಿರುತ್ತದೆ. ಆದರೆ ಒಳಮೀಸಲಾತಿಯಲ್ಲಿ ಪರಿಶಿಷ್ಟ ಜಾತಿಯ ಯಾವ ಸಮಾಜಕ್ಕೂ ಕೂಡ ನ್ಯಾಯ ಸಿಗದೆ 101 ಜಾತಿ ಜನಾಂಗಕ್ಕೆ ಕಣ್ಣಿಗೆ ಮಣ್ಣೆರ್ಚುವ ಕೆಲಸ ಕಾಂಗ್ರೆಸ್ ಸರಕಾರ ಮಾಡಿರುತ್ತದೆ ಎಂದು ಆರೋಪಿಸಿದರು.ಸಚಿವ ಸಂಪೂಟದಲ್ಲಿ ಕಾಟಾಚಾರಕ್ಕಾಗಿ ಒಳಮೀಸಲಾತಿಯನ್ನು ಶೇಕಡ 50% ಮೀಸಲಾತಿಯನ್ನು ಒಳಗೊಂಡು ಶೇಕಡ 15% ಮೀಸಲಾತಿಯನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಪ್ರವರ್ಗ (ಎ) 5.2.5 ಉಪಜಾತಿಗಳು 18 ಇರುತ್ತವೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.